ಅಧ್ಯಕ್ಷರು.—ಈಗಲೇ ಮಾಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗಲೇ ಮಾಡುವಹಾಗಿದ್ದರೆ ಆಡ್ಜೆಯಿಲ್ಲ. ಏತಕೆಂದರೆ ಈ ವಿಷಯ ಚರ್ಚೆಯಾಗಬೇಕು. ಇದು ಬಹಳ ಗಂಭೀರವಾದ ವಿಚಾರವಾದ್ದರಿಂದ ಯಾವ ರೂಪದಲ್ಲಾದರೂ ಚರ್ಚೆಯಾಗಬೇಕಾಗುತ್ತದೆ. ಈ ವಿಚಾರ ಇಡೀ ಕರ್ನಾಟಕದ ಜನತೆಯ ಗಮನವನ್ನು ಸೆಳೆದಿದೆ. ಬರೀ ಹೆತ್ತವರ ಮನಸ್ಸನ್ನು ತಲ್ಲಣಗೊಳಿಸುವಂಥ ಆಥವಾ ಅವರಿಗೆ ದುಃಖವನ್ನು ತರಿಸುವಂಥ ವಿಚಾರ ಮಾತ್ರವಲ್ಲ. ಕರ್ನಾಟಕ ರಾಜ್ಯದಲ್ಲಿರತಕ್ಕ ಎಲ್ಲರ ಮನಸ್ಸಿನಲ್ಲಿ ಗೊಂದಲ ಉಂಟಾಗಿದೆ. ಆದ್ದರಿಂದ ಈ ಬಗ್ಗೆ ಧೀರ್ಘವಾಗಿ ಚರ್ಚೆಯಾಗಬೇಕು. ತಾವು ಚರ್ಚೆಗೆ ಅನುಮತಿ ಕೊಡಬೇಕು. ಇದು ಗಂಭೀರವಾದ ವಿಚಾರವಾದ್ದರಿಂದ ನಿಲುವಳಿ ಸೂಚನೆ ಮೂಲಕ ತಂದಿದ್ದೇನೆ. ಈ ವಿಚಾರವನ್ನು ಚರ್ಚೆ ಮಾಡದೇ ಸದನದ ಬೇರೆ ಕಾರ್ಯಕ್ಕೆ ಹೋಗುವುದಕ್ಕೆ ನನ್ನ ಮನಸ್ಸಿಲ್ಲ.

೧೨-೩೦ ಪಿ.ಎಂ.

ಶ್ರೀ ಎಸ್. ಬಂಗಾರಪ್ಪ.—ಈ ಬಗ್ಗೆ ಚರ್ಚೆ ಮಾಡಲು ಒಂದು ಅನುಕೂಲಕರವಾದ ಸಂದರ್ಭವನ್ನು ಒದಗಿಸಿಕೊಳ್ಳುವುದು ಒಳ್ಳೆಯದು. ಈ ವಿಷಯವನ್ನು ಗಮನ ಸೆಳೆಯುವ ಸೂಚನೆಯಾಗಿ ತೆಗೆದುಕೊಂಡರೆ ಹೆಚ್ಚು ವಿಚಾರಗಳನ್ನು ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಉತ್ತರ ಕೊಡಲು ಒಪ್ಪಿಕೊಂಡಿರುವುದರಿಂದ ಇದನ್ನು ನಿಯಮ ೩೩೪ರ ಕೆಳಗೆ ಚರ್ಚೆ ಮಾಡಿದರೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಇದು ನನ್ನ ಸಲಹೆ.

MR. SPEAKER —Rule 334 has very limited scope. ಹಾಗೆ ಮಾಡಿದಾಗ ತಾವು ವಿವರವನ್ನು ಕೇಳಬಹುದೇ ಹೊರತು ಈ ಬಗ್ಗೆ ಒತ್ತಾಯ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಗಮನ ಸೆಳೆಯುವ ಸೂಚನೆಯಾದರೆ.....

ಶ್ರೀ ಎಸ್. ಬಂಗಾರಪ್ಪ.—ಹೇಳಿಕೆ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸಿದ್ಧರಾಗಿದ್ದಾರೆ ಆದ್ದರಿಂದ ಏನೂ ತೊಂದರೆ ಆಗುವುದಿಲ್ಲ.

ಅಧ್ಯಕ್ಷರು,—ಹೇಳಿಕೆ ಬಂದಮೇಲೆ ಕ್ಲಾರಿಫಿಕೇಷನ್ ಕೇಳಬಹುದಲ್ಲಾ?

ಶ್ರೀ ಎಸ್. ಬಂಗಾರಪ್ಪ.—ಗಮನ ಸೆಳೆಯುವ ಸೂಚನೆಯಲ್ಲಾದರೆ ನಾವು ವಿವರಗಳನ್ನು ಹೇಳಿವುದಕ್ಕೆ ಆಗುವುದಿಲ್ಲ. ಆದುದರಿಂದ ತಾವು ನಿಯಮ ೩೩೪ರ ಕೆಳಗೆ ಅಡ್ಮಿಟ್ ಮಾಡಬಹುದು. ಹಾಗೂ ಕಾಲವನ್ನು ಉಳಿಸಬಹುದು.

ಅಧ್ಯಕ್ಷರು.—ಇಲ್ಲಿ ಎರಡು ಸಲಹೆಗಳು ಇವೆ. ಒಂದು. ಗಮನ ಸೆಳೆಯುವ ಸೂಚನೆಯು ಮುಖ್ಯಾಂತರ ಚರ್ಚೆ ಮಾಡಬೇಕೇ ಆಥವಾ ಒಂದು ಗಂಟೆಗೆ ಸೀಮಿತವಾಗಿ ಈ ವಿಷಯವನ್ನು ಚರ್ಚೆ ಮಾಡುವುದೇ ಎಂಬುದು.

ಶ್ರೀ ಎಸ್. ಬಂಗಾರಪ್ಪ.—ಒಂದು ಗಂಟೆಯ ಚರ್ಚೆಗೆ ನಾನು ಸಿದ್ಧನಿದ್ದೇನೆ.

ಶ್ರೀ ಎಂ ಎಸ್. ಕೃಷ್ಣನ್.—ಒಂದು ಗಂಟೆ ಚರ್ಚೆಗೆ ಅವಕಾಶ ಕೊಟ್ಟರೆ ಒಳ್ಳೆಯದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇವತ್ತೇ ಚರ್ಚೆ ಮಾಡುವುದಾದರೆ ನಮ್ಮದೂ ಒಪ್ಪಿಗೆ ಇದೆ.

ಅಧ್ಯಕ್ಷರು.—ಈ ಸೂಚನೆಯನ್ನು ನಿಯಮ ೬೮ರ ಕೆಳಗೆ ಸೂಚನೆ ಮಾಡಿ ಈ ದಿನ ಸಾಯಂಕಾಲವೆ ಚರ್ಚೆ ಮಾಡೋಣ.

ಹಕ್ಕಿ ಚ್ಯುತಿ ನಿರ್ಣಯದ ಮೇಲೆ ಚರ್ಚೆ

ಕನ್ನಡ ಪ್ರಭಾ ದಿನಪತ್ರಿಕೆಯಲ್ಲಿ ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಬರೆದಿರುವ ಸಂಪಾದಕೀಯದ ಬರವಣಿಗೆ ಬಗ್ಗೆ

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ ಒಂದು ಹಕ್ಕು ಚ್ಯುತಿ ಹಾಗೂ ಅದಕ್ಕೆ ಸಂಬಂಧಪಟ್ಟಹಾಗೆ ಒಂದು ನಿರ್ಣಯವನ್ನು ನಾನು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಬೇರೆ ಮಾನ್ಯ ಸದಸ್ಯರುಗಳು ನಿನ್ನೆ ತಮ್ಮ ಗಮನಕ್ಕೆ ತಂದಿದ್ದೇವೆ. ಈ ಬಗ್ಗೆ ಇವತ್ತು ಪ್ರಸ್ತಾಪ ಮಾಡಲು

ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ತಮಗೆ ಗೊತ್ತಿರುವ ಹಾಗೆ, ಕ್ಯಾಪಿಟೇಷನ್ ಶುಲ್ಕದ ವಿಚಾರದಲ್ಲಿ ಸರ್ಕಾರ ಪಂಡಿತರಕ್ಕೆ ಮಸೂದೆಯ ವಿಚಾರದಲ್ಲಿ ನಾವು ವಿವರಗಳನ್ನು ಇಟ್ಟು ಮಾತನಾಡಿದ್ದೇವೆ. ಆ ಬಗ್ಗೆ ಮಾತನಾಡತಕ್ಕದ್ದು ಈ ಸದನದ ಎಲ್ಲಾ ಪಕ್ಷದ ಸದಸ್ಯರ ಹಕ್ಕು ಮತ್ತು ಕರ್ತವ್ಯದ ಪ್ರಶ್ನೆ ಇದೆ ಎಂದು ಹೇಳುತ್ತೇನೆ. ಆ ಒಂದು ದೃಷ್ಟಿಯಿಂದ ಅಭಿಪ್ರಾಯ ವ್ಯಕ್ತ ಪಡಿಸುವ ಸಂದರ್ಭದಲ್ಲಿ ನಾವು ನಮ್ಮ ಚಿಂತನೆಯ ಚೌಕಟ್ಟಿನಲ್ಲಿ ನಮ್ಮ ವಿಚಾರಧಾರೆಗಳನ್ನು ಹರಿಸುವಾಗ ಇದರಲ್ಲಿ ಏನು ಅನಿಷ್ಟ ಪದ್ಧತಿ ಇದೆ ಕ್ಯಾಪಿಟೇಷನ್ ಶುಲ್ಕದ ಪಿಡುಗು ಏನಿದೆ, ಅದನ್ನು ತೊಡೆದು ಹಾಕುವ ವಿಚಾರದಲ್ಲಿ ನಮ್ಮ ನಮ್ಮ ಅಭಿಪ್ರಾಯಗಳನ್ನು ಕೊಡತಕ್ಕದ್ದು ನಮ್ಮಲ್ಲಿ ಸಹಜವಾಗಿ ಬಂದಿರತಕ್ಕ ಪದ್ಧತಿ ಕೆಲವೊಂದು ಸಾರಿ ಕೆಲವರದ್ದು ವಿಭಿನ್ನ ಅಭಿಪ್ರಾಯ ಇರಬಹುದು. ವಿಷಯವನ್ನು ಗಮನದಲ್ಲಿ ಇಟ್ಟುಕೊಂಡು ನಾವು ನಮ್ಮ ಅಭಿಪ್ರಾಯವನ್ನು ಹೇಳುವುದು ನಮ್ಮ ಹಕ್ಕು ಹಾಗೂ ಕರ್ತವ್ಯದ ಪ್ರಶ್ನೆಯಾಗಿದೆ. ಆ ಹಕ್ಕನ್ನು ಚಲಾವಣೆ ಮಾಡುವ ಸಮಯದಲ್ಲಿ ನಮ್ಮ ಅಭಿಪ್ರಾಯಗಳನ್ನು ಹೇಳುವ ಹಕ್ಕು ಪ್ರತಿಯೊಬ್ಬ ಸದಸ್ಯರಿಗೂ ಇದೆ. ನಾವು ಹೇಳತಕ್ಕ ವಿಚಾರಗಳನ್ನು ಪತ್ರಿಕೆಗಳವರು ಪ್ರಕಟ ಮಾಡತಕ್ಕ ಒಂದು ಪದ್ಧತಿ ನಡೆದುಕೊಂಡು ಬಂದಿದೆ. ಪತ್ರಿಕೆಗಳು ಮತ್ತು ರೇಡಿಯೋಗಳು ಇವತ್ತು ಈ ಮಾಧ್ಯಮಗಳು ಏನಿವೆ ಇವುಗಳನ್ನು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಸ್ವಾಗತ ಮಾಡಿಕೊಂಡು ಬಂದಿದ್ದೇವೆ. ನಮಗೆ ಇವುಗಳ ಮೇಲೆ ಅನನ್ಯವಾಗಿರತಕ್ಕ ನಂಬಿಕೆ ಇದೆ, ಪ್ರಜಾಪ್ರಭುತ್ವ ಉಳಿಯಬೇಕು, ಬೇಳೆಯಬೇಕೆಂದಿದ್ದರೆ ಹಲವಾರು ವಿಷಯಗಳ ಬಗ್ಗೆ ಮುಕ್ತ ವಾತಾವರಣದಲ್ಲಿ ವಿಷಯಗಳ ಚಿಂತನೆಯಾಗಬೇಕಾಗಿದೆ. ಈ ಬಗ್ಗೆ ಪತ್ರಿಕೆಗಳ ಕರ್ತವ್ಯ ದೊಡ್ಡದು, ಆ ಬಗ್ಗೆ ಒಂದು ಪರಿಸರವನ್ನು ನಿರ್ಮಾಣ ಮಾಡತಕ್ಕದ್ದು ಅವಶ್ಯ ಇದೆಯೆಂದು ನಾನು ಹೇಳುತ್ತೇನೆ. ಪತ್ರಿಕೆಗಳ ಬಗ್ಗೆ ನಾವು ಅಪಾರವಾದ ಗೌರವವನ್ನು ಇಟ್ಟುಕೊಂಡು ಬಂದಿದ್ದೇವೆ. ವೃತ್ತಪತ್ರಿಕೆಗಳಲ್ಲಿ ಬರತಕ್ಕ ಬರವಣಿಗೆಗಳನ್ನು, ಬರಹಗಳನ್ನು ನಾವು ಕೆಲವೊಂದು ಸಾರಿ ಕಂಡಿದ್ದೇವೆ. ಅವರ ಟೀಕೆ ಟಿಪ್ಪಣಿಗಳನ್ನು ನಾವು ಸ್ವಾಗತ ಮಾಡಿದ್ದೇವೆ. ನಾವು ಕೊಡಶಕ್ಕ ಅಭಿಪ್ರಾಯಗಳು ಸರಿಯಿಲ್ಲದಿದ್ದರೆ ಆ ಬಗ್ಗೆ ವಿವರಗಳನ್ನು ಕೊಟ್ಟು ಬರೆಯುವುದು ಅವರ ಹಕ್ಕು ಮತ್ತು ಧರ್ಮ. ಅವರ ಒಂದು ಚಿಂತನೆ ಮತ್ತು ಬರವಣಿಗೆ ನ್ಯಾಯ ರೂಪದಲ್ಲಿ ಇರಬೇಕು, ಸರಿಯಾದ ದಾರಿಯಲ್ಲಿ ಇರಬೇಕು. ಆದರಲ್ಲಿ ಸದನದ ಸದಸ್ಯರ ಹಕ್ಕುಗಳಿಗೆ ಚ್ಯುತಿ ಬರಬಾರದು, ಹಾಗೆ ಬಂದರೆ ತಮಗೇ ಗೊತ್ತಿರುವಹಾಗೆ ನಾವು ಯಾರೂ ಕೂಡಾ ಈ ಸದನದಲ್ಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲವೆಂದು ನಾನು ಹೇಳುತ್ತೇನೆ. ಈ ಒಂದು ಸಂದರ್ಭದಲ್ಲಿ ನಿನ್ನೆಯ ದಿನ ಕನ್ನಡಪ್ರಭಾ ದಿನಪತ್ರಿಕೆಯಲ್ಲಿ ಒಂದು ಸಂಪಾದಕೀಯ ಅಚ್ಚು ಆಗಿದೆ. ನಾನು ಎಷ್ಟೋ ಸಂಪಾದಕೀಯವನ್ನು ನೋಡಿದ್ದೇನೆ. ಅವರು ಸಂಪಾದಕೀಯವನ್ನು ಬರೆಯಲಿ. ಸಂತೋಷ. ''ಅಪ್ಪಟ ಅನಿಷ್ಟ'' ಎನ್ನುವ ಶಿರೋನಾಮೆಯನ್ನು ಪಡೆದುಕೊಂಡ ಬರವಣಿಗೆ ಅದರಲ್ಲಿ ಅಚ್ಚಾಗಿ ಬಂದಿದೆ. ಅಧ್ಯಕ್ಷರೇ, ಇದನ್ನು ಒಂದು ಸಾರಿ ಓದಿ ತಮ್ಮ ಗಮನಕ್ಕೆ ತಂದರೆ ಇರುವ ವಿಚಾರ ಏನು ಎಂಬುದು ತಮಗೆ ವೇದ್ಯವಾಗುತ್ತದೆ ಎಂಬುದು ನನ್ನ ಭಾವನೆ.

> ''ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶಕ್ಕೆ ಭಾರಿ ಹಣ ವಸೂಲಿ. ಇದು ಅಪ್ಪಟ ಅನಿಷ್ಟ. ಇದನ್ನು ತೊಡೆಯು ಬೇಕಾದುದು ಅತ್ಯಗತ್ಯ. ಅವಸರವಾಗಿ ಆಗಬೇಕಾದ ಕೆಲಸವೂ ಹೌದು.
>
> ಜನತಾ ಪಕ್ಷದ ಸರ್ಕಾರ ಈ ಹಣ ವಸೂಲಿಯನ್ನು ತೊಡೆಯಲು ಬದ್ಧ. ಐದು ವರ್ಷಗಳ ಅವಧಿಯಲ್ಲಿ ಹಂತಹಂತವಾಗಿ ತೊಡೆಯುವ ಸಂಕಲ್ಪ. ಈ ಯೋಜನೆ ಅಷ್ಟೇನೂ ತೃಪ್ತಿಕರವಲ್ಲ. ಇದುವರಿಗೆ ಸಾಕಷ್ಟು ಹಣ ಲಪಟಾಯಿಸಿರುವ ತಾಂತ್ರಿಕ ಶಿಕ್ಷಣದ ಈ ಅಂಗಡಿಗಳಿಗೆ ಏಕೆ ದಯೆ ತೋರಿಸಬೇಕು
>
> ಈ ವಿದ್ಯಾಲಯಗಳನ್ನು ಯಾವ ಪರೋಪಕಾರ ಬುದ್ಧಿಯಿಂದಲೂ ತೆಗೆದಿಲ್ಲ. ಹಣಗಳಿಸಲೆಂದೇ ಈ ಕುವ್ಯಾಪಾರ. ಇದನ್ನು ಒಂದೇ ಏಟಿಗೆ ಮುಗಿಸುವುದೇ ಸೂಕ್ತ. ಚೌಕಾಶಿ ಮಾಡಿದರೆ ಇಂದಿನ ಪರಿಸ್ಥಿತಿಯನ್ನೇ ಎದುರಿಸಬೇಕಾದೀತು. ಯಾವ ಮಧ್ಯ ಮಾರ್ಗವೂ ಸರ್ಕಾರಕ್ಕೆ ಒಳ್ಳೆಯ ಹೆಸರನ್ನು ತಾರದು.
>
> ಈಗ ಆಗಿರುವುದು ಹಾಗೆಯೇ ಐವತ್ತು ಸಾವಿರ ರೂಪಾಯಿಗಳ ಇಡುಗಂಟನ್ನು ಎಷ್ಟು ಜನ ಇಡಬಲ್ಲರು ಹತ್ತು ವರ್ಷದ ತರುವಾಯ ಅದು ಪಾಪಸು ಬರುವುದಂತೆ. ಆಲ್ಲಿಯವರೆಗೆ ವರ್ಷಕ್ಕೆ ಹದಿನೈದು ಪ್ರತಿಶತ ಬಡ್ಡಿ ಹಿಡಿದರೂ ಎಪ್ಪತ್ತೈದು ಸಾವಿರ ರೂಪಾಯಿಗಳ ಗಳಿಕೆ.

ಇನ್ನೂ ಒಂದು ಪ್ರಶ್ನೆ. ಹತ್ತು ವರ್ಷಗಳ ಬಳಿಕ ಈ ಐವತ್ತು ಸಾವಿರ ರೂಪಾಯಿಗಳ ಮೌಲ್ಯ ಇಳಿದೇ ಹೋಗಿರುತ್ತದೆ. ಇದೆಲ್ಲಾ ಈ ಖಾಸಗಿ ಸಂಸ್ಥೆಗಳಿಗೆ ಲಾಭದಾಯಕ, ಹೊರಗಿನ ವಿದ್ಯಾರ್ಥಿಗಳಿಗೆ ಒಂದೂವರೆ ಲಕ್ಷ ರೂಪಾಯಿಗಳ ವಂತಿಗೆ. ಆದು ಕಾಗದದ ಮೇಲೆ ಪಡೆಯುವ ಹಣ. ಆದರ ಹೊರತಾಗಿ ಮತ್ತಷ್ಟು ಹಣವನ್ನು ಈ ಸಂಸ್ಥೆಗಳು ವಸೂಲಿ ಮಾಡದೆ ಇರುವುದಿಲ್ಲ. ಶಾಸನದ ಇಕ್ಕಟ್ಟಿಗೆ ಅವರು ಸಿಕ್ಕುವುದೂ ಇಲ್ಲ. ಮತ್ತಷ್ಟು ಕಪ್ಪು ಹಣದ ಸಂಗ್ರಹ,

ಈ ಎಲ್ಲಾ ಕಸರತ್ತೂ ವ್ಯರ್ಥ. ಇದೊಂದಕ್ಕೂ ಅರ್ಥವಿಲ್ಲ. ಈ ಶುಲ್ಕದ ಪದ್ಧತಿಯೇ ಹೋಗತಕ್ಕದ್ದು. ಅದನ್ನು ಹಂತಹಂತವಾಗಿ ತೆಗೆದು ಹಾಕುವೆವು ಎಂಬುದು ಕೇಡಿನೊಡನೆ ರಾಜಿ ಮಾಡಿಕೊಂಡಂತೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್ ಇಷ್ಟೆ. ವಿಷಯ ಪ್ರಸ್ತಾಪ ಮಾಡುವುದಕ್ಕೆ ಯಾವ ರೀತಿಯಲ್ಲೂ ನನ್ನ ಆಕ್ಷೇಪ ಇಲ್ಲ. ಆದರೆ, ಈ ಸದನದ ಸಂಪ್ರದಾಯದ ಪ್ರಕಾರ ಪತ್ರಿಕೆಯನ್ನು ಇಲ್ಲಿ ಓದಬಾರದು. ಕಟಿಂಗ್ಸ್ ಇದ್ದರೆ ಓದಬಹುದು. ಪತ್ರಿಕೆಗಳನ್ನೇ ಓದುವುದಕ್ಕೆ ಪ್ರಾರಂಭ ಮಾಡಿದರೆ, ನಾಳೆ ಎಲ್ಲರೂ ಓದುವುದಕ್ಕೆ ಪ್ರಾರಂಭ ಮಾಡಬಹುದು ಇದರ ಬಗ್ಗೆ, ತಾವು ತಿಳುವಳಿಕೆ ಕೊಟ್ಟರೆ ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ.—ಕಟಿಂಗ್ ಮಾಡಿದ್ದು ಇದೆ. ಇದನ್ನು ಕಟ್ ಮಾಡಿಲ್ಲ.

ಅಧ್ಯಕ್ಷರು.—ದಾಖಿಲಾತಿಗಾಗಿ ಕೋಟ್ ಮಾಡುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ.

"ಈ ಪದ್ಧತಿಯನ್ನು ಟೀಕಿಸುವ ಪ್ರತಿಪಕ್ಷದ ಶೂರರಿಗೆ ಯಾವ ನೀತಿ ಬಲವೂ ಇಲ್ಲ. ಅವರು ಅಡಳಿತದಲ್ಲಿದ್ದ ಕಾಲದಲ್ಲೇ ಈ ಅನಿಷ್ಟ ಆರಂಭ ಆದಷ್ಟು, ಅವರೆಲ್ಲರೂ ಹಣ ಲಪಟಾಯಿಸಿದವರೇ, ಅಪಾರ ಹಣ ತೆಗೆದುಕೊಂಡು ಈ ಕಾಲೇಜುಗಳಲ್ಲಿ ಸ್ಥಾನಗಳನ್ನು ಹೆಚ್ಚಿಸಿದರು. ಕಾಲೇಜುಗಳಲ್ಲಿ ಸಾಕರ್ಯದ ಮಟ್ಟವನ್ನು ಗಮನಿಸಲಿಲ್ಲ. ಈ ಶುಲ್ಕಕ್ಕೆ ಅಖಿಂಡ ಆಶೀರ್ವಾದ ನೀಡಿದರು ಹಿಂದಿನ ಸರಕಾರದವರೇ, ಅವರ ಮಾತಿನಲ್ಲಿ ಈಗ ಯಾವ ಅರ್ಥವೂ ಇಲ್ಲ.

ಅಧ್ಯಕ್ಷರು.—ಅಷ್ಟಕ್ಕೇ ಸಿಮೀತವಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಆದು ಹೇಗಾದರಿರಲಿ, "ಅವರಿಗೆ ಯಾವ ನೀತಿ ಬಲವೂ ಇಲ್ಲ. ಈ ಅನಿಷ್ಟ ಆರಂಭವಾದದ್ದೂ ಅವರ ಕಾಲದಲ್ಲೇ, ಅವರೆಲ್ಲರೂ ಹಣ ಲಪಟಾಯಿಸಿದವರೇ" ಇದು ಬಹಳ ಮುಖ್ಯವಾದ ವಾಕ್ಯ. ಅವರೆಲ್ಲರೂ ಹಣ ಲಪಟಾಯಿಸಿದ್ದಾರೆಂದು ಏನು ಹೇಳಿದ್ದಾರೆ, ಇದು ಬಹಳ ಮುಖ್ಯವಾದ ವಾಕ್ಯ. ಅಧಿಕಾರದಲ್ಲಿ ನಾನೂ ಕೂಡ ಇದ್ದೆ. ಅನೇಕ ಜನ ಅಧಿಕಾರದಲ್ಲಿದ್ದರು. ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆಯವರು ಹಿಂದೆ ಅಧಿಕಾರಲ್ಲಿದ್ದರು. ಈ ಪಿಡಗು ಪ್ರಾರಂಭವಾದದ್ದೇ ೧೯೭೨ ರಲ್ಲಿ ಆಗ ಜತ್ತಿಯವರ ಮಂತ್ರಿಮಂಡಲ ಇತ್ತು, ಆದರಲ್ಲಿ ಹೆಗಡೆಯವರು, ರಾಚಯ್ಯನವರು, ವಿ. ಎಲ್. ಪಾಟೀಲರು ಇದ್ದರು.

ಅಧ್ಯಕ್ಷರು.—ವಿಷಯಕ್ಕೆ ಬನ್ನಿ.

ಶ್ರೀ ಎಸ್. ಬಂಗಾರಪ್ಪ.—ಈ ಒಂದು ಪಿಡಗು ಅನೇಕ ವರ್ಷಗಳಿಂದ ಬಂದಿದೆ ಅಧಿಕಾರದಲ್ಲಿದ್ದಾಗ ಹಣ ತೆಗೆದುಕೊಂಡಿದ್ದಾರೋ, ಬಿಟ್ಟಿದ್ದಾರೋ ಎನ್ನುವ ಪ್ರಶ್ನೆಗೆ ನಾನು ಹೋಗುವುದಿಲ್ಲ. ಹಣ ತೆಗೆದುಕೊಂಡಿದ್ದಾರೆನ್ನುವ ಮಾತನ್ನು ಆಡಿದ್ದಾರೆ. ಒಂದು ವೇಳೆ ಆ ರೀತಿ ಹಣದ ಆಧಾರದ ಮೇಲೆ ಉದ್ಭವವಾಗಿ ಒಡಮೂಡಿ ಬಂದಿರತಕ್ಕ ಪಿಡಗು ಎಂದು ರುಜುವಾತು ಪಡಿಸುವುದು ಅಷ್ಟು ಸುಲಭವಾದ ಕೆಲಸವಲ್ಲ. ಅಧಿಕಾರದಲ್ಲಿ ಇರತಕ್ಕವರು ಹಣ ಲಪಟಾಯಿಸಿದ್ದಾರೆ ಎಂದರೆ ಏನರ್ಥ ತಾವು ಅಧ್ಯಕ್ಷರಾಗಿದ್ದೀರಿ, ನಾಳೆ ವಿರೋಧಪಕ್ಷ ಕಡೆ ಬರಬಹುದು ನಾನು ಆ ರೀತಿ ಆಸೆಪಡುವುದಿಲ್ಲ. ಬೇರೆ ರೀತಿಯಲ್ಲಿ ಕಾಳಿತು ಕೊಳ್ಳಬಹುದು. ಇದು ಬಹಳ ಆಪಾಯಕಾರಿ ಬರವಣಿಗೆ. ಈ ಕಡೆ ಇದ್ದಾಗ ಒಂದು ರೀತಿಯ ಬರವಣಿಗೆ. ಆ ಕಡೆ ಕೂತುಕೊಂಡಾಗ ಮತ್ತೊಂದು ರೀತಿಯ ಬರವಣಿಗೆ ಬರೆಯುವುದು ಬಹಳ

ಅಪಾಯಕಾರಿ. ನಾನೂ ಕೂಡ ಶ್ರೀಪಾನ್ ದೇವರಾಜ್ ಅರಸರ ಮಂತ್ರಿಮಂಡಲದಲ್ಲಿದ್ದಾಗ, ಶ್ರೀಮಾನ್ ಗುಂಡುರಾಯರ ಮಂತ್ರಿಮಂಡಲದಲ್ಲಿದ್ದಾಗ ಈ ಒಂದು ಪಿಡಗನ್ನು ತಡೆಹಿಡಿಯಬೇಕು. ಇದರಿಂದ ಸಮಾಜಕ್ಕೆ ಒಳ್ಳೆಯದಾಗುವುದಿಲ್ಲವೆಂದು ಪತ್ರಗಳನ್ನು ಬರೆದಿದ್ದೇನೆ. ಅಂದು ಮಂತ್ರಿಮಂಡಲದ ಸಭೆಯಲ್ಲಿ ಕೂಡ ತಿಳಿಸಿದ್ದೇನೆ.

ಅಧ್ಯಕ್ಷರು,--ಪ್ರಿವಿಲೇಜಿಗೆ ಬನ್ನಿ.

ಶ್ರೀ ಎಸ್. ಬಂಗಾರಪ್ಪ.--ಮಾನ್ಯ ಅಧ್ಯಕ್ಷರೇ, ಕೆಲವು ಸಂದರ್ಭದಲ್ಲಿ ೧೦-೧೫ ಸೀಟುಗಳನ್ನು ಇಟ್ಟುಕೊಳ್ಳುತ್ತಿದ್ದರು, ಇವತ್ತು ಅದನ್ನು ಕೂಡ ತೆಗೆದುಹಾಕಿದ್ದಾರೆ. ಫ್ರೀ ಸೀಟುಗಳನ್ನು ಹಣಕ್ಕಾಗಿ ಕೊಡಬಹುದೆಂಬ ಉದ್ದೇಶದಿಂದ ಆ ರೀತಿ ಮಾಡಿರಬಹುದು. ನಾನು ಅಧಿಕಾರದಲ್ಲಿದ್ದಾಗ ಬಡ ಮಕ್ಕಳಿಗೆ ಸೀಟುಗಳನ್ನು ಕೊಡಿಸಿದ್ದೇನೆ. ಇವತ್ತು ಗುಲ್ಬರ್ಗ, ದಾವಣಗೆರೆ ಹಾಗೂ ಮೈಸೂರು ಗಳಲ್ಲಿ ಅವರು ಓದುತ್ತಿದ್ದಾರೆ. ಈ ಬರವಣಿಗೆಯ ಅರ್ಥ ನೋಡಿದರೆ ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಪತ್ರಿಕೆ ಕೈಯಲ್ಲಿದೆಯೆಂದೂ ಕೆಲವು ವ್ಯಕ್ತಿಗಳು ಹೀಗೆ ಬರೆಯುತ್ತಾರೆ, ಎಲ್ಲರೂ ಹಾಗೆ ಇಲ್ಲ. ಅನೇಕ ವರ್ಷಗಳಿಂದ ರಾಜಕೀಯ ಜೀವನದಲ್ಲಿ ಪ್ರತಿಕೆಯವರು ನಾವು ಸ್ನೇಹಿತರಾಗಿದ್ದೇವೆ. ಸಾರ್ವಜನಿಕ ಜೀವನದಲ್ಲಿರತಕ್ಕ ವ್ಯಕ್ತಿಗಳ ಮುಖಕ್ಕೆ ಮಂಸಿ ಬಳಿಯತಕ್ಕ ಕೆಲಸ ಮಾಡಬಾರದು. ನನ್ನ ಜೀವನದಲ್ಲಿ ಆದರಲ್ಲಿಯೂ ರಾಜಕೀಯವಾಗಿ ನಾನು ಯಾವತ್ತೂ ಆಷ್ಟದಾರಿಯಲ್ಲಿ ರಾಜಕೀಯ ಮಾಡಿದವನಲ್ಲ, ಆ ರೀತಿ ಆಗಿರುವುದು ನಿಜವಾಗುವುದಾದರೆ ನಾನು ರಾಜಕೀಯ ಜೀವನದಿಂದಲೇ ನಿವೃತ್ತಿಯಾಗಿ ಮನೆಗೆ ಹೋಗುತ್ತೇನೆ, ನಾನು ಬಿಗಿಯಾದ ರಾಜಕಾರಣ ಮಾಡಿ ಕೊಂಡು ಬಂದವನು. ಅದೇ ರೀತಿ ಮಾನ್ಯ ಸದಸ್ಯರುಗಳು ತಮ್ಮ ರಾಜಕೀಯ ಜೀವನದಲ್ಲಿ ಬಂದಿದ್ದಾರೆ. ಸಾರ್ವಜನಿಕ ಜೀವನದಲ್ಲಿ ಒಳ್ಳೆಯ ಅಭಿಪ್ರಾಯ ಇಟ್ಟುಕೊಂಡು ಕೆಲಸ ಮಾಡುವಂಥ ಸಂದರ್ಭದಲ್ಲಿ ಇಂತಹ ಬರವಣಿಗೆಗಳು ಶಾಸಕರ ಬಗ್ಗೆ ಅಧಿಕಾರ ನಡೆಸಿದವರ ಬಗ್ಗೆ ಬಂದರೆ, ಸಾರ್ವಜನಿಕರು ನಮ್ಮ ಬಗ್ಗೆ ಏನು ತಿಳಿದುಕೊಳ್ಳುತ್ತಾರೆ. ಇದರಲ್ಲಿ ಶಾಸಕರಾದ ನಮ್ಮ ಹಕ್ಕು ಇದೆ. ಇಂಥ ಬರವಣಿಗೆಗೆ ಅವಕಾಶ ಕೊಟ್ಟರೆ ರಾಜಕೀಯ ಜೀವನದಲ್ಲಿ ಮಾನ ಮರ್ಯಾದೆಯಿಂದ ಹಾಗೂ ಗೌರವದಿಂದ ನಾವ್ಯಾರು ಇರುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಇದರಲ್ಲಿ ಸದನದ ಗೌರವದ ಪ್ರಶ್ನೆಯೂ ಇದೆ. ಎಲ್ಲಕ್ಕಿಂತ ಮುಖ್ಯವಾಗಿ ಪ್ರಜಾಪ್ರಭುತ್ವದ ಪ್ರಶ್ನೆ ಇದೆ. ಕಾನೂನಿನ ಪ್ರಶ್ನೆ ಬಗ್ಗೆ ಅನಂತರ ಹೇಳುತ್ತೇನೆ, ಇದು ಬಹಳ ಗಂಭೀರವಾದ ವಿಚಾರವಾಗಿರುವುದರಿಂದ ಸದನದಲ್ಲಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಶಿವಮೂರ್ತಿ --ಮಾನ್ಯ ಅಧ್ಯಕ್ಷರೇ ನಿನ್ನೆ ಕನ್ನಡ ಪ್ರಭ ಪತ್ರಿಕೆಯಲ್ಲಿ ಬಂದಿರತಕ್ಕಂಥ ಸಂಪಾದಕೀಯದಲ್ಲಿ ವಿರೋಧಪಕ್ಷಗಳ ಬಗ್ಗೆ ಬಹಳ ಲಘುವಾಗಿ ಬರೆದಿರುವುದು ಬಂದಿದೆ. ಕ್ಯಾಪಿಟೇಷನ್ ಶುಲ್ಕವನ್ನು ತೊಡೆದು ಹಾಕುವ ವಿಷಯದಲ್ಲಿ ಪ್ರಸ್ತಾಪ ಮಾಡುತ್ತಾ ಇದರಲ್ಲಿ ವಿರೋಧ ಪಕ್ಷಗಳವರು ಶಾಮೀಲಾಗಿದ್ದಾರೆನ್ನುವ ಅರ್ಥದಲ್ಲಿ ಬರೆದು, ಇಡೀ ಕರ್ನಾಟಕ ಜನತೆಯ ವಿಶ್ವಾಸಧಾರೆಯನ್ನು ಕೆದಕಿದ್ದಾರೆ. ಇದು ಬಹಳ ಮಹತ್ವದ ವಿಷಯವಾಗಿರುವುದರಿಂದ ಅಲ್ಲದೆ. ಇದರಲ್ಲಿ ಶಾಸಕರ ಹಕ್ಕಿಗೆ ಚ್ಯುತಿ ಬಂದಿರುವುದರಿಂದ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.--ಸನ್ಮಾನ್ಯ ಅಧ್ಯಕ್ಷರೇ ಹಕ್ಕುಚ್ಯುತಿಗೆ ಸಂಬಂಧಪಟ್ಟ ವಿಚಾರ ಗಳನ್ನು ಸನ್ಮಾನ್ಯ ಸದಸ್ಯರಾದಂಥ ಬಂಗಾರಪ್ಪನವರು ಪ್ರಸ್ತಾಪ ಮಾಡಿದ್ದಾರೆ, ನಾವು ಈ ಸದನದ ಸದಸ್ಯರಾಗಿ ನಿರ್ಭೀತಿಯಿಂದ ಕೆಲಸ ಮಾಡಬೇಕಾಗಿರುತ್ತದೆ. ಯಾವುದೇ ರೀತಿಯಾದ ಒತ್ತಡಕ್ಕೆ ಬಲಿಯಾಗದೆ, ಯಾವುದೇ ರೀತಿಯ ಆಮಿಷಗಳಿಗೆ ಬಲಿಯಾಗದೆ, ರಾಜ್ಯದ ಹಿತಾಸಕ್ತಿಗೆ ಮತ್ತು ಪ್ರಜಾ ಪ್ರಭುತ್ವತದ ಮೌಲ್ಯಗಳನ್ನು ಎತ್ತಿ ಹಿಡಿಯಲಿಕ್ಕೆ ನಾವು ಇಲ್ಲಿ ಕೆಲಸ ಮಾಡಬೇಕಾದ ಪ್ರಸಂಗ ಬಂದಾಗ ವ್ಯಕ್ತಿ ಅಥವಾ ಸಂಸ್ಥೆಯ ತೇಜೋವಧೆ ಮಾಡಿ ತನೂಲ್ಮಕ ಬೇರೆ ಬೇರೆ ರೀತಿಯ ಒತ್ತಡ ತಂದಂಥ ಈ ಸದನದಲ್ಲಿ ಯಾವುದೇ ಸದಸ್ಯರನ್ನು ನಿಷ್ಕ್ರಿಯವಾಗಿ ಮಾಡತಕ್ಕ ಕ್ರಮ, ಯಾವುದೇ ಸದಸ್ಯರನ್ನು ಬೆದರಿಸತಕ್ಕ ಕ್ರಮ, ಅಥವಾ ಯಾವುದೇ ಸದಸ್ಯರನ್ನು ಬ್ಲಾಕ್‌ಮೈಲ್ ಮಾಡತಕ್ಕ ಕ್ರಮ ಆದಾಗ ಸದಸ್ಯರ ರಕ್ಷಣೆಗೆ ತಾವು ಬರಬೇಕಾಗುತ್ತದೆ. ಇಲ್ಲದೇ ಇದ್ದರೆ, ಸಮಾಜದ ಬೇರೆ ಬೇರೆ ಪಟ್ಟಭದ್ರ ಹಿತಾಸಕ್ತಿಗಳ ಕೆಲವು ವಿಷವರ್ತುಲಗಳ ಸುಳಿಯಲ್ಲಿ ಶಾಸಕರು ಸಿಕ್ಕಿ, ಇಲ್ಲಿ ಕೆಲಸಕಾರ್ಯಗಳನ್ನು ಸರಿಯಾಗಿ ನಿಷ್ಪಕ್ಷಪಾತವಾಗಿ ನಡೆಸಲಿಕ್ಕೆ ನಮ್ಮ ವಾದವನ್ನು ನಾವು ಸಭೆಯ ಮುಂದಿಡಲಿಕ್ಕೆ ಸಾಧ್ಯ

ವಾಗಂವುದಿಲ್ಲ. ಸಾರ್ವಜನಿಕ ಕ್ಷೇತ್ರದಲ್ಲಿ ನಾವೆಲ್ಲಾ ಇದ್ದೇವೆ. ಸಾರ್ವಜನಿಕ ಕ್ಷೇತ್ರದಲ್ಲಿ ಇದ್ದಾಗ ಕೆಲವು ವಿಚಾರಗಳನ್ನು ಖಂಡನೆ ಮಾಡಬೇಕಾಗುತ್ತದೆ. ಕೆಲವು ವಿಚಾರಗಳನ್ನು ಮೆಚ್ಚಬೇಕಾಗುತ್ತದೆ. ನಾವು ಸಂಸ್ಥೆಗಳ ಅಥವಾ ಪಕ್ಷದ ಧ್ಯೇಯಂಗಳನ್ನು ನಿರ್ಭೀತಿಯಿಂದ ಇಡಬೇಕಾಗುತ್ತದೆ. ಈ ಕಾರ್ಯಕ್ರಮವನ್ನು ನಾವು ನಿರ್ವಹಣೆ ಮಾಡತಕ್ಕ ಸಂದರ್ಭದಲ್ಲಿ ಒಂದು ರೀತಿಯ ಟೀಕೆ, ಒಂದು ಬ್ಲಾಕ್ ಮೈಲ್, ಒಂದು ಒತ್ತಡ, ಒಂದು ಪ್ರಭಾವ ಶಾಸಕರ ಮೇಲೆ ಹುಟ್ಟಿಸುವುದು ಇದ್ದರೆ, ಈ ಸದನದಲ್ಲಿ ಸರಿಯಾಗಿ ಕೆಲಸ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಈ ಕ್ಯಾಪಿಟೇಷನ್ ಫೀ ಬಗ್ಗೆ ತಮಗೆ ಗೊತ್ತಿದೆ. ಈ ಶುಲ್ಕದ ಬಗ್ಗೆ ವಿಧೇಯಕ ಈ ಸದನದ ಮುಂದೆ ಬಂದಾಗ ನಾನು ಮೊದಲೇ ಪ್ರಸ್ತಾಪ ಮಾಡುವಾಗ ಈ ಸದನಕ್ಕೆ ಮನವರಿಕೆ ಮಾಡಿಕೊಟ್ಟಿದ್ದೇನೆ. ಈ ಕ್ಯಾಪಿಟೇಷನ್ ಬಿಲ್ ಮೇಲೆ ಮಾತನಾಡುವಾಗ ಬೇರೆ ಬೇರೆ ರೀತಿಯ ಒತ್ತಡ ಒಡ್ಡುತ್ತಿದ್ದಾರೆಂದು ನಾನಂ ಪ್ರಾಸ್ತಾವಿಕವಾಗಿ ಭಾಷಣ ಮಾಡಿದ್ದೇನೆ. ಬೇರೆ ಬೇರೆ ಕಡೆಯಿಂದ ಒತ್ತಡ ಹಾಕಿ, ನಮ್ಮನ್ನು ಬ್ಲಾಕ್ ಮೈಲ್ ಮಾಡುತ್ತಾರೆ, ಪ್ರಾಮಾಣಿಕ ವಿಚಾರಗಳನ್ನು ಈ ಸದನದ ಒಳಗೆ. ಹೊರಗೆ ಎತ್ತಲಿಕ್ಕೆ ಬಿಡುವುದಿಲ್ಲ ಎಂದು ಹೇಳಿದ್ದೇನೆ. ಅದನ್ನು ಹೇಳಿದ ಮೂರನೆಯ ದಿವಸವೇ. ೧೮ನೇ ತಾರೀಖಿಗೆ ಅಂದರೆ ನೆನ್ನೆ ಪತ್ರಿಕೆಯ ಸಂಪಾದಕೀಯ ಭಾಗದಲ್ಲಿ ಕೆಲವು ವಿಚಾರಗಳನ್ನು ಬರೆದಿದ್ದಾರೆ. ನಾವು ಕಟುವಾಗಿ ಖಂಡಿಸಿದ್ದೇವೆ. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಕ್ಯಾಪಿಟೇಷನ್ ಶುಲ್ಕದ ರದ್ದತಿಯ ಬಗ್ಗೆ ಯಾವುದೇ ಸರ್ಕಾರ ನಿರ್ಣಯ ತೆಗೆದುಕೊಂಡಿದ್ದರೆ ಅದು ನಮ್ಮ ಹಿಂದಿನ ಸರ್ಕಾರ. ೧೯೭೨ ರಲ್ಲಿ ಪತೋಟಿ ಪ್ರಾರಂಭವಾಯಿತು. ದಿವಂಗತ ದೇವರಾಜ್ ಅವರನ್ನು ನೆನಪು ಮಾಡಿಕೊಳ್ಳಬೇಕು.

ಅಧ್ಯಕ್ಷರು.—ಪ್ರಿವಿಲೇಜ್‌ಗೆ ಸಂಬಂಧಪಟ್ಟ ವಿಚಾರ ತಿಳಿಸಬೇಕು..... ...

SRI M. VEERAPPA MOILY —I am speaking on the privilege issue only.

ಶ್ರೀ ಹೆಚ್. ಡಿ. ದೇವೇಗೌಡ — ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಿವಿಲೇಜ್ ಮೇಲೆ ಮಾತನಾಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಅಧ್ಯಕ್ಷರೆ, ನಾನು ಅದರ ಮೇಲೆ ಮಾತನಾಡುತ್ತಿದ್ದೇನೆ. ಇದು ೧೯೭೨ನೇ ಇಸವಿಯಿಂದ ಹಿಡಿತ ಬಂದದ್ದು. ಅದರ ಹಿಂದೆ ಯಾವ ಹಿಡಿತ ಇರಲಿಲ್ಲ. ಪತ್ರಿಕೆಯಲ್ಲಿ ವಿರೋಧ ಪಕ್ಷದವರು ಒಳಸಂಚಿನ ಮಾತನಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು.— ತಾವು ಕೊಟ್ಟಿರತಕ್ಕ ನೋಟೀಸ್‌ನಲ್ಲಿ ಇದರಲ್ಲಿ ಹೇಳಿರತಕ್ಕ ನಿಬಂದನೆಗಳನ್ನು ಹಾಕಿಲ್ಲ. It is not supported by document.

SRI M. VEERAPPA MOILY.— Our document is the paper. We sent it. This Kannada Prabha was in your file,

MR. SPEAKER.— Please confine to the document.

SRI M. VEERAPPA MOILY.—Sir. there is a comment about previous Government. It pertains to that. ಈಗ ಅವರು ಓದಿದ್ದರೂ ಸಹ ಇನ್ನೂ ಓದುವ ಅವಶ್ಯಕತೆ ಇದೆ. ಅದರಲ್ಲಿ ಏನಂ ಬರೆದಿದ್ದಾರೆ ಅಂದರೆ.—

> "ಒಳಸಂಚಿನ ಮಾತನಾಡುತ್ತಾರೆ. ಅದು ಇಂದಿನ ಸರ್ಕಾರಕ್ಕೆ ಗೊತ್ತಿಲ್ಲದ ಸಂಗತಿ. ಅದೆಲ್ಲಾ ಇಂದಿರಾ ಕಾಂಗ್ರೆಸ್ಸಿನ ಭ್ರಷ್ಟ ರಾಜಕಾರಣಿಗಳ ಕಾರ್ಯಕ. ಅವರೇ ಹುಟ್ಟು ಹಾಕಿದ ಕಂತಂತ್ರ" ಈ ರೀತಿ ಹೇಳಿದ್ದಾರೆ.

ನಾವೇನು ಇದನ್ನು ಪ್ರಾರಂಭ ಮಾಡಲಿಲ್ಲ.

ಅಧ್ಯಕ್ಷರು.— ಈಗ ಇರತಕ್ಕ ಪ್ರಶ್ನೆ ಎಡಿಟೋರಿಯಲ್‌ನಲ್ಲಿ ಬಂದಿರತಕ್ಕ ವಿಚಾರ ಪ್ರಿವಿಲೇಜ್ ಆಗುತ್ತದೆಯೇ ಆ ವಿಚಾರ ಮಾತನಾಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಈಗ ಈ ಕ್ಯಾಪಿಟೇಷನ್ ಶುಲ್ಕದ ವಿಚಾರವಾಗಿ ಮಸೂದೆ ಈ ಸಭೆಯಲ್ಲಿ ಇದೆ. ಅದರ ಗುಣಾವಗುಣಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಬೇಕಾದಷ್ಟು ಅವಕಾಶ ಇದೆ. ಇಲ್ಲಿ ಸೀಮಿತ ಪ್ರಶ್ನೆ ಅಂದರೆ ಒಂದು ಪತ್ರಿಕೆಯಂಪರಂ ಸಂಪಾದಕೀಯವನ್ನು ಬರೆದಿದ್ದಾರೆ.

ಅದರಿಂದ ಈ ಸಭೆಯ ಸದಸ್ಯರಿಗೆ ಹಕ್ಕುಚ್ಯುತಿ ಬಂದಿದೆ ಎಂದು ಇದೆ. ಈ ವಿಚಾರಕ್ಕೆ ಸೀಮಿತ ಇರ ಬೇಕೆಂದು ನನ್ನ ಮನವಿ. ಯಾವರೀತಿಯಿಂದ ಹಕ್ಕುಚ್ಯುತಿ ಆಗುತ್ತದೆ ಅದನ್ನು ತಿಳಿಸಬೇಕು. ನಾವು ಪತ್ರಿಕಾ ಸ್ವಾತಂತ್ರ್ಯವನ್ನು ಗೌರವಿಸುತ್ತಿದ್ದೇವೆ. ಶಾಸಕರಾದಂಥ ನಮಗೆ ಹಕ್ಕುಬಾಧ್ಯತೆಗಳಿವೆ. ನಮ್ಮ ಜನತಾ ಪ್ರತಿನಿಧಿಗಳು ಟೀಕಾಕಾರರಲ್ಲ. ನಮ್ಮ ನಡತೆಯನ್ನು ಟೀಕಿಸತಕ್ಕ ಹಕ್ಕು ಪತ್ರಿಕೆಯವರಿಗೂ ಇದೆ ಸಾರ್ವಜನಿಕರಿಗೂ ಇದೆ. ಅದನ್ನು ಗಮನದಲ್ಲಿಟ್ಟುಕೊಂಡು ಅವರ ವಾದವನ್ನು ಮುಂದುವರಿಸಬೇಕು,

We are not above criticism.

SRI M. VEERAPPA MOILY.— There is document before me and we are depending on that.

ಅಧ್ಯಕ್ಷರು.—ಈಗ ತಾವು ನೋಟೀಸ್ ಕೊಟ್ಟಿದ್ದೀರಿ.

ಶ್ರೀ ಎಂ. ವೀರಪ್ಪಮೊಯಿಲಿ.— ಮಾನ್ಯ ಅಧ್ಯಕ್ಷರೇ, ಡಾಕ್ಯುಮೆಂಟ್ ಅದರ ಜೊತೆ ಜೆರಾಕ್ಸ್ ಪ್ರತಿಲಗತ್ತಿಸಿ ಕರಿಸಿದ್ದೇನೆ. ಅದನ್ನು ಎತ್ತಿ ತರುವ್ಯ ಗಮನಕ್ಕೆ ತರುತ್ತಿದ್ದೇನೆ. ಈಗ ಸಂಪಾದಕೀಯದಲ್ಲಿ ಏನು ಹೇಳಿದ್ದಾರೆ ಅದನ್ನು ತಂದಿದ್ದೇನೆಯೇ ಹೊರತಂ ಬೇರೆ ಏನೂ ಇಲ್ಲ.

MR. SPEAKER.—In the matter of privilege you are allowed to make a short statement relevent to the point. Therefore,...

SRI M. VEERAPPA MOILY.—I will make shortest statement. ಇದನ್ನು ಹೇಳಲಿಕ್ಕೆ ಹೋದರೆ ಬಹಳ ಇದೆ. ಈಗ ನಾನು ಜೀರೋ, ಜೀರೋ, ಜೀರೋ ಪಾಯಿಂಟ್ ಒನ್ ಹೇಳುತ್ತಿದ್ದೇನೆ. ಪತ್ರಿಕೆಯಲ್ಲಿ ಏನು ಹೇಳಿದ್ದಾರೆಂದರೆ ವಿರೋಧ ಪಕ್ಷದವರೆಲ್ಲಾ ಹಣ ಲಪಟಾಯಿಸಿದವರಾಗಿದ್ದಾರೆ ಎಂದು. This reflects on the Bill.

SRI S. R. BOMMAI.—I request the hon.member to yield for a minute.

SRI M. VEERAPPA MOILY.— No. Sir, what I would like to say is, ಕ್ಯಾಪಿಟೇಷನ್ ಮಸೂದೆ ಮೇಲೆ ನಾವು ಮಾಡಿದಂಥ ಬಿಲ್ಲು ಈಗಲೂ ಇದೆ. ಅದು ನಿರ್ಣಯ ಆಗಲಿಲ್ಲ. ಈ ವಿಚಾರ ಮುಂಗಿದ ಮೇಲೆ ಅದು ಪಾಸ್ ಆಗಬಹುದು ಅಥವಾ ರಿಜೆಕ್ಟ್ ಆಗಬಹುದು. ಈ ಮಧ್ಯೆ ನಾವು ಮಾಡಿದ ಭಾಷಣದ ವಿಚಾರ ಏನಿದೆ ಅದನ್ನು ಎತ್ತಿ ಹಿಡಿದು ಅದರ ಬಗ್ಗೆ ನಮ್ಮನ್ನು ಬ್ಲಾಕ್‌ಮೈಲ್ ಮಾಡತಕ್ಕದ್ದು, ನಮಗೆ ಹೆದರಿಸಿ ಈ ಕ್ಯಾಪಿಟೇಷನ್ ವಿಚಾರದಲ್ಲಿ ಮಾತನಾಡಬಾರದು ಮಾತನಾಡಿದರೆ ನೀವು ಹಣ ತಿಂದಿದ್ದೀರಿ. ಈ ಮಸೂದೆಯನ್ನು ವಿರೋಧ ಮಾಡಿದರೆ ಹಣ ತಿಂದಿದ್ದೀರಿ ಇನ್ನು ಮುಂದೆ ಯಾರೂ ಮಾತನಾಡುವ ಹಾಗೆ ಇಲ್ಲ....

ಶ್ರೀ ಎಸ್. ಆರ್. ಬೊಮ್ಮಾಯಿ —ತಮಗೆ ಸಾಕಷ್ಟು ಮನಬಲ ಇದೆ ಎಂದು ತಿಳಿದುಕೊಂಡಿದ್ದೆ.

ಶ್ರೀ ಎಂ. ವೀರಪ್ಪಮೊಯಿಲಿ.— ಮನಬಲ ಇದೆ, ಹಾಗೆಯೇ ನೈತಿಕ ಬಲವೂ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ — ಇದು ನಾಳೆ ಬೊಮ್ಮಾಯಿಯವರಿಗೂ ಬರಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.— ಒಂದು ಪತ್ರಿಕೆಯಲ್ಲಿ ಟೀಕೆ ಬಂದರೆ, ಆ ವಾದವನ್ನು ಮುಂದುವರಿಸಿಕೊಂಡು ಹೋಗತಕ್ಕ ಸ್ಥೈರ್ಯ, ಧೈರ್ಯ ಇಲ್ಲ ಅಂದರೆ ಅರ್ಥವಾಗುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಪತ್ರಿಕೆ ಮೂಲಕ ಈ ಬ್ಲಾಕ್‌ಮೈಲ್ ಕೆಲಸ ಏತಕ್ಕೆ ಮಾಡಬೇಕು ? ಅದನ್ನು ನಾನು ಹೇಳುತ್ತಿದ್ದೇನೆ. ಆದ್ದರಿಂದ ಇವತ್ತು...

ಅಧ್ಯಕ್ಷರು.— ಪ್ರಿವಿಲೇಜ್‌ನಲ್ಲಿ ಇದು ಏತಕ್ಕೆ ಬರುತ್ತದೆ ? ಇದು ಏನಾಗುತ್ತದೆ ಎಂದರೆ...

ಶ್ರೀ ಎಂ. ವೀರಪ್ಪಮೊಯ್ಲಿ.— ಮಾನ್ಯ ಅಧ್ಯಕ್ಷರೆ,...

SRI H. D. DEVEGOWDA.— I rise to a point of order.

(ಗೊಂದಲ)

ಶ್ರೀ ಹೆಚ್. ಡಿ. ದೇವೇಗೌಡ.-- ಯಾರು ಏಜೆನ್ಸಿ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ದಯವಿಟ್ಟು ಹೇಳಬೇಕು. ಅವರು ಆ ರೀತಿ ಹೇಳುವುದರ ಅರ್ಥವಾದರೂ ಏನು ?

ಶ್ರೀ ಎಂ. ವೀರಪ್ಪ ಮೊಯಿಲಿ.--ನೀವು ಅಲ್ಲ.

ಶ್ರೀ ಹೆಚ್. ಡಿ ದೇವೇಗೌಡ.— ಇನ್ನು ಯಾರ ಮೇಲೆ ಇನ್‌ಸಿನ್ಯುಯೇಷನ್ ? If you want to make allegation, you make specific allegation.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.--ನೀವು ನಮಗೆ ಹೆದರಿಸುತ್ತಿದ್ದೀರಾ ? ಈ ರೀತಿಯ ಹೆದರಿಕೆಯ ಭಾವನೆಯನ್ನು ಮಾಡಿದರೆ ಇಲ್ಲಿ ಯಾರೂ ಹೆದರುವವರು ಇಲ್ಲ,

ಶ್ರೀ ಹೆಚ್. ಡಿ. ದೇವೇಗೌಡ.-- ಇದಕ್ಕೆ ಯಾರೂ ಹೆದರುವುದಿಲ್ಲ, ಇದನ್ನು ನೀವು ತಿಳಿದು ಕೊಳ್ಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.--ನೀವೂ ನಮ್ಮನ್ನು ಹೆದರಿಸುವುದಕ್ಕಾಗುವುದಿಲ್ಲ.

SRI H. D. DEVEGOWDA.-- If you want to make allegation, you make specific allegation.

SRI M. VEERAPPA MOILY.-- I know how to make allegation and when to make allegations.

SRI H.D. DEVEGOWDA.--Don't try to cast aspersions unnecessarily If you want to make allegation, make specific allegations.

SRI M. VEERAPPA MOILY.--I know how to make allegation. You need not teach me about that.

SRI H.D. DEVEGOWDA.--'You don't take shelter through a paper' What do you mean by saying...

SRI M. VEERAPPA MOILY.— You also don't take the shelter under a news paper.

(ಗೊಂದಲ)

ಶ್ರೀ ಎಂ. ರಘುಪತಿ.-- ಮಾನ್ಯ ಅಧ್ಯಕ್ಷರೆ, ಇದು ಹೇಗೆ ಕ್ರಿಯಾಲೋಪವಾಗುತ್ತದೆಂದು ನಾನು ಕೇಳುತ್ತೇನೆ. ಇವರು ಏಜೆನ್ಸಿಯನ್ನು ಯಾವರೀತಿ ಉಪಯೋಗಿಸಿಕೊಳ್ಳುತ್ತಿದ್ದಾರೆಂಬುದು ನನಗೆ ಗೊತ್ತಿದೆಯೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಅದು ಅವರಿಗೆ ಗೊತ್ತಿದ್ದರೆ ಅದನ್ನು ನಿರ್ದಿಷ್ಟವಾಗಿ ಹೇಳಬೇಕು. ಆ ಪತ್ರಿಕೆಯಲ್ಲಿ ಯಾರ ಹೆಸರೂ ಬರಲಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಮಾತನ್ನು ಇವತ್ತು ಸಾಬೀತು ಮಾಡಬೇಕಾಗಿಂತ್ತದೆ. ಪೇಪರ್ ಮೂಲಕ ಪೆಲ್ಟರ್ ತೆಗೆದುಕೊಳ್ಳುತ್ತಿದ್ದಾರೆಂದರೆ, ನಾವು ಯಾವರೀತಿ ತೆಗೆದುಕೊಳ್ಳುತ್ತಿದ್ದೇವೆ ಯಾರ ಮೂಲಕ ತೆಗೆದುಕೊಳ್ಳುತ್ತಿದ್ದೇವೆಂಬುದನ್ನೂ ಕೂಡ ಅವರಂ ಸಾಬೀತು ಮಾಡಬೇಕಾಗುತ್ತದೆ.

MR. SPEAKAR.— The issue is privilege. Let us come to privilege issue.

ಶ್ರೀ ಎಂ. ಎಸ್ ಕೃಷ್ಣನ್.—ಮಾನ್ಯ ಅಧ್ಯಕ್ಷರೇ. ನನದೊಂದು ಕ್ರಿಯಾಲೋಪ ಏನೆಂದರೆ ಈಗ ಸಭೆಯ ಮುಂದಿರುವ ಪ್ರಿವಿಲೇಜ್ ಮೋಷನನ್ನು ಅಡ್ಜೆಸ್ಟ್ ಮಾಡಬೇಕೆ? ಬೇಡವೆ? ಎಂಬುದು ಆದರೆ ಈ ರೀತಿ ಮಧ್ಯೆ ಮಧ್ಯೆ ಪ್ರವೇಶ ಮಾಡಿ ಮಾತಾಡುತ್ತಾ ಹೋದರೆ ಇದರ ಪ್ರಾಮುಖ್ಯತೆಯೇ ಹೋಗಿ ಬಿಡುತ್ತದೆ. ಯಾರೂ ಏನು ಹೇಳುತ್ತಾರೆಂಬುದನ್ನು ನಾವು ತಿಳಿದು ಕೊಳ್ಳುವುದಕ್ಕೆ ಆಗುವುದಿಲ್ಲ. ಅವರು ಏನೋ ಆಪಾದನೆಯನ್ನು ಮಾಡಿರಬಹುದು. ಆದರೆ ಅದಕ್ಕೆ ನೋಟೀಸನ್ನು ಕೊಡಲು ಇವರಿಗೂ ಅವಕಾಶ ಇದೆ. ಆದರೆ ಈ ರೀತಿ ಮಧ್ಯೆ ಮಧ್ಯೆ

ನಿಂತುಕೊಂಡು ಮಾತನಾಡುತ್ತಾ ಹೋದರೆ ಪ್ರಿವಿಲೇಜ್ ಮೋಷನ್‌ನ ಪ್ರಾಮುಖ್ಯತೆಯೇ ಹೋಗಿಬಿಡುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.— ಪ್ರಿವರನ್ನು ಹೇಳಬೇಕಾಗಿಲ್ಲ. ನೇರವಾಗಿ ಎಲ್ಲಿ ಹಕ್ಕು ಚ್ಯುತಿಯಾಗಿದೆ ಎಂಬುದನ್ನು ಸಮರ್ಥನೆ ಮಾಡಬೇಕು ಯಾರು ಏಜೆನ್ಸಿ ಎಂಬುದನ್ನು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.— ಪ್ರಿವರವನ್ನು ಹೇಳಬೇಕಾದ ಸಂದರ್ಭ ಬಂದಾಗ ಹೇಳುತ್ತೇವೆ. ಮಾನ್ಯ ಅಧ್ಯಕ್ಷರೇ, ಈ ಸದನಕ್ಕೆ ಮಾನ್ಯ ದೇವೇಗೌಡರೂ ಹೊಸಬರಲ್ಲ. ನಾವೂ ಹೊಸಬರಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ನೀವಿಬ್ಬರೂ ಹೊಸಬರಲ್ಲ. ನೀವು ಆ ಕಡೆ ಅವರು ಈ ಕಡೆ, ಇಲ್ಲ ನೀವು ಈ ಕಡೆ, ಅವರು ಆ ಕಡೆ ಇರುತ್ತೀರಿ, ಅದೇ ಇಲ್ಲಿ ಬಂದಿರುವುದು.

ಶ್ರೀ ಎಸ್. ಸೂರ್ಯನಾರಾಯಣರಾವ್.—ಸಂಪಾದಕರು ಸಂಪಾದಕೀಯದಲ್ಲಿ ಏನು ಬರೆದಿದ್ದಾರೆ ಅದು ಈ ಸದನದ ಸದಸ್ಯರ ಹಕ್ಕಿಗೆ ಚ್ಯುತಿ ಬರುತ್ತದೆ ಎಂದರೆ ಅದರ ಮೇಲೆ ಮಾತನಾಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಅಧ್ಯಕ್ಷರೇ.....

MR. SPEAKER.—Please conclude.

SRI M. VEERAPPA MOILY.—I am sorry. How can I conclude without stating.....

MR. SPEAKER.—I am also sorry. I cannot allow the discussion to go on like this.

ಶ್ರೀ ಎಂ. ವೀರಪ್ಪ ಮೊಯ್ಲಿ.— ಮಾನ್ಯ ಅಧ್ಯಕ್ಷರೇ, ತಾವು ನಮ್ಮ ಎಲ್ಲಾ ವಾದವನ್ನೂ ಒಂದು ಫ್ರೇಂನಲ್ಲಿಟ್ಟು ಇದೇ ರೀತಿ ಮಾತನಾಡಬೇಕೆಂದು ಹೇಳುವುದಾದರೆ ಬಹಳ ಕಷ್ಟವಾಗುತ್ತದೆ. ತಮಗೆ ತಿಳಿದಿರುವಂತೆ ಪ್ರಿವಿಲೇಜ್ ಮೋಷನನ ಮೇಲೆ ಪ್ರಿವಿಲಿಮಿನರಿ ಸಬ್ಮಿಷನನ್ನೇ ಗಂಟೆಗಟ್ಟಲೆ ಮಾಡಿದ್ದು ಇದೆ. ನಾನು ೦೦ ನಿಮಿಷ ಕೂಡ ಮಾತನಾಡಿಲ್ಲ ಈ ಮಧ್ಯೆ ಸಾಕಷ್ಟು ಸದ್ಯಸರು ಮಧ್ಯೆ ಪ್ರವೇಶಮಾಡಿ ಮಾತನಾಡಿದ್ದರಿಂದ ನಾನು ಸುಮ್ಮನೆ ಕೂತುಕೊಳ್ಳಬೇಕಾಯಿತು. ನಮ್ಮ ವಾದವನ್ನು ಸಂಪೂರ್ಣವಾಗಿ ಕೇಳದೆ ತಾವು ನಿರ್ಣಯವನ್ನು ತೆಗೆದುಕೊಳ್ಳುವುದಾದರೆ ನಾವು ಕುಳಿತುಕೊಳ್ಳುತ್ತೇವೆ. ನಮಗೆ ಸರಿಯಾದ ಅವಕಾಶ ಸಿಕ್ಕದಿದ್ದರೆ ಈ ವಿಚಾರ ಏನೂ ವಿಶ್ಲೇಷಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಕ್ಯಾಪಿಟೇಷನ್ ಶುಲ್ಕದ ವಿಚಾರದಲ್ಲಿ ಸರ್ಕಾರ ನಿರ್ಣಯವನ್ನು ತೆಗೆದುಕೊಂಡಿದ್ದನ್ನು ನಾವು ವಿಶೇಷವಾಗಿ ಖಂಡನೆ ಮಾಡಿದ್ದೇವೆ ನಾವು ಖಂಡನೆ ಮಾಡಿದ್ದರಿಂದ ಖಾಸಗಿ ಕಾಲೇಜಿನವರಿಗೆ ಸಂತೋಷವಾಗಿಲ್ಲ ಇದು ಸರ್ಕಾರಕ್ಕೆ ಕೂಡ ಮೆಚ್ಚುಗೆಯಾಗುವುದಿಲ್ಲ. ಏಕೆಂದರೆ, ನಾವು ಖಂಡನೆ ಮಾಡಿದ್ದು ನಿಮಗೆ ಯಾವುದು ವಿಹಿತವಾಗುವುದಿಲ್ಲ. ನಾವು ಯಾವುದಾದರೂ ರಚನಾತ್ಮಕವಾದ ಟೀಕೆಯನ್ನು ಮಾಡಿದರೆ ನೀವು ಅದನ್ನು ಸಹೃದಯದಿಂದ ಸ್ವಾಗತಮಾಡಬೇಕು. ವಿರೋಧ ಪಕ್ಷದವರಾದ ನಾವುಸರ್ಕಾರದ ನೀತಿಯನ್ನು ವಿರೋಧ ಮಾಡಿದ್ದನ್ನು ಪತ್ರಿಕಾ ಸಂಪಾದಕರು ಎತ್ತಿ ಹಿಡಿದು ಇದನ್ನು ವಿರೋಧಿಸುವವರೆಲ್ಲಾ ಹಣವನ್ನು ಲಪಟಾಯಿಸುವವರು ಎನ್ನುವ ಅಬ್ಸಲ್ಯೂಟ್ ಕನ್‌ಕ್ಲೂಷನ್‌ಗೆ ಆ ಸಂಪಾದಕರು ಬರುವುದು ಸರಿಯೇ? ಸಂಪಾದಕೀಯದ ಮುಖಾಂತರ ಆ ಪತ್ರಿಕಾ ಸಂಪಾದಕರು ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದಾರೆಂದರೆ ''ಪ್ರತಿಪಕ್ಷದವರು ಯಾವುದನ್ನು ವಾದ ಮಾಡಬಾರದು ಮತ್ತು ವಾದ ಮಾಡಿದರೆ ನೀವು ಪತ್ರಿಕೆಯಲ್ಲಿ ಟೀಕೆಯನ್ನು ಎದುರಿಸಬೇಕಾಗುತ್ತದೆ. ಎನ್ನುವ ತೂಗು ಕತ್ತಿಯನ್ನು ಶಾಸಕರ ಮೇಲೆ ತೂಗಾಡಿಸುವ ಪುಟ್ಟಕ್ಕೆ ಅವರು ವರ್ತನೆ ಮಾಡುವುದಾದರೆ ಅದು ಖಂಡಿತವಾಗಿಯೂ ಸದ್ಯಸ್ಯರ ಹಕ್ಕಿಗೆ ಚ್ಯುತಿ ಬರುತ್ತದೆ. ಧೈರ್ಯಸ್ಥೈರ್ಯ ಇಲ್ಲದ ಶಾಸಕರು ಹೆದರುವ ಪರಿಸ್ಥಿತಿ ಬರುತ್ತದೆ. ಆದರೆ ನಾನು ಮೊನ್ನೆಯೇ ಹೇಳಿದ್ದೇನೆ, ನಮ್ಮ ಪ್ರಾಣ ಹೋದರೂ ಕೂಡ ನಮ್ಮ ಸಿದ್ಧಾಂತವನ್ನು ಯಾರೂ ಕೂಡಾ ತಡೆಯುವುದಕ್ಕೆ ಸಾಧ್ಯವಿಲ್ಲ. ಎಂದು ಪತ್ರಿಕೆಯವರ ಸ್ವಾತಂತ್ರ್ಯವನ್ನು ನಾವು ಸಂಪೂರ್ಣವಾಗಿ

ಒಪ್ಪಿಕೊಳ್ಳುತ್ತೇವೆ. ಅವರಿಗೆ ಸ್ವಾತಂತ್ರ್ಯ ಬೇಕಾಗುತ್ತದೆ. ಅವರೂ ಕೂಡ ರಚನಾತ್ಮಕವಾಗಿ ಟೀಕೆವ ಮಾಡಬೇಕಾಗುತ್ತದೆ. ಅವರು ಮಂತ್ರಿಗಳ ಮೇಲೆ ಅಥವಾ ಸಾರ್ವಜನಿಕ ಜೀವನದಲ್ಲಿರುವವರ ಮೇಲೆ ಟೀಕೆಯನ್ನು ಮಾಡಬಹುದು ಪತ್ರಿಕೆಯವರನ್ನು ರಾಜಕೀಯವಾಗಿ, ವೈಯಕ್ತಿಕವಾಗಿ ಏನು ಹೇಳಿ ಹೆದರಿಸಬೇಕೋ ಅದು ನಮಗೆ ಗೊತ್ತಿದೆ. ಆದರೆ ಇವತ್ತು ಸದನದಲ್ಲಿ ನಡೆದಂತ ಕಾರ್ಯಕಲಾಪ ವಾದ, ಮತ್ತು ಶಾಸಕರ ವರ್ತನೆಯ ಬಗ್ಗೆ, ಅವರ ನಡತೆಯ ಬಗ್ಗೆ ಏನೋ ಒಂದು ಅಭಿಪ್ರಾಯವನ್ನು ಇಟ್ಟುಕೊಂಡು ಟೀಕೆ ಮಾಡುವುದಾದರೆ ಈ ಸದನದಲ್ಲಿ ಕಾರ್ಯ ಕಲಾಪಗಳನ್ನು ಮಾಡುವುದಕ್ಕೆ ಕಷ್ಟವಾಗುತ್ತದೆ. ಇದರಿಂದ ಶಾಸಕರ ಹಕ್ಕಿಗೆ ಚ್ಯುತಿ ಬರುತ್ತದೆ. ಆವತ್ತು ಮಾನ್ಯ ಸದಸ್ಯರಾದ ದೇವೆಗೌಡರು ಒಂದು ಸವಾಲನ್ನು ಕೊಟ್ಟರು. ಅದು ಏನೆಂದರೆ ಶಕ್ತಿ ಇದ್ದರೆ ಈ ಸವಾಲನ್ನು ಸ್ವೀಕರಿಸಲಿ ಎಂದು. ನಾವು ಅವತ್ತೇ ಹೇಳಿದ್ದೇವೆ. ನಾವು ಸವಾಲನ್ನು ಸ್ವೀಕರಿಸುತ್ತೇವೆ ಎಂದು ೧೯೬೨ನೇ ಇಸವಿಯಿಂದಲೂ ಮೆಡಕಲ್ ಕಾಲೇಜಿನ ಅಡ್ಮಿಷನ್ ವಿಚಾರ ಬಲ್ಲಿ ಏನಾಗಿದೆ ಅದರ ಬಗ್ಗೆ....

MR. SEPEAKER.—That is not the point.

SRI M. VEERAPPA MOILY.—That is relevant. I am reading out the something.

ಇವತ್ತು ಕನ್ನಡಪ್ರಭ ಪ್ರತೀಯ ಸಂಪಾದಕೀಯದಲ್ಲಿ ಏನು ಬಂದಿದೆ ಅದರಿಂದ ಮಾನ್ಯ ಸದಸ್ಯರ ಹಕ್ಕಿಗೆ ಚ್ಯುತಿ ಬಂದಿದೆ. ಇದರಲ್ಲಿ ಬ್ಲಾಕ್‌ಮೇಲ್ ಮಾಡುವ ಕೆಲಸ ಸದಸ್ಯರಮೇಲೆ ನಡೆದಿದೆ. ಆದ್ದರಿಂದ ಹಕ್ಕು ಚ್ಯುತ್ಯಿಯ ಮೇಲೆ ಇಲ್ಲಿ ಚರ್ಚೆಯಾಗಬೇಕು, ಇಲ್ಲದಿದ್ದರೆ ಇದನ್ನು ಹಕ್ಕು ಬಾಧ್ಯತಾ ಸಮಿತಿಗೆ ಒಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಕನ್ನಡಪ್ರಭ ಪತ್ರಿಕೆಯಲ್ಲಿ ಬಂದಿರುವ ವಿಚಾರದ ಬಗ್ಗೆ ವಿಶೇಷ ವಾಗಿ ಮಾನ್ಯ ಸದಸ್ಯರು ಪ್ರಸ್ತಾಪವನ್ನು ಮಾಡಿದ್ದಾರೆ. ನಾನು ಅದರ ಬಗ್ಗೆ ಮಾತನಾಡಲು ಹೋಗು ವುದಿಲ್ಲ. ಇಲ್ಲಿ ಪ್ರಶ್ನೆ ಏನೆಂದರೆ ಇದು ಸದಸ್ಯರ ಹಕ್ಕುಬಾಧ್ಯತೆಗೆ ಚ್ಯುತಿ ಬರುತ್ತದೆಯೆ ಎನ್ನುವುದು. ಪತ್ರಿಕೆಗಳ ಹಕ್ಕುಬಾಧ್ಯತೆಯ ಬಗ್ಗೆ, ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗು ವುದಿಲ್ಲ. ಇವರು ಟೀಕೆ ಮಾಡುವುದಕ್ಕೂ ಸ್ವಾತಂತ್ರ್ಯವಿದೆ. ಪತ್ರಿಕಾ ಕರ್ತರಿಗೂ ಜವಾಬ್ದಾರಿ ಇದೆ. ನಾವೂ ಕೂಡ ಸಾರ್ವಜನಿಕ ಸೇವಕರು. ಆದ್ದರಿಂದ ನಾವು ಕೆಲವು ಸಂದರ್ಭದಲ್ಲಿ ಟೀಕೆಗೆ ಒಳಗಾಗ ಬೇಕಾಗುತ್ತದೆ. ಆ ಟೀಕೆಗೆ ನಾವು ಹೆದರುವವರಲ್ಲ ಆದರೆ ಪತ್ರಿಕೆಯವರು ಟೀಕೆಯನ್ನು ಮಾಡು ವಾಗ ಸರಿಯಾಗಿ ಮಾಡಬೇಕು. ಆ ಟೀಕೆ ಸದಸ್ಯರ ನಡವಳಿಕೆಯ ಬಗ್ಗೆ ಮತ್ತು ಅವರ ಹಕ್ಕಿಗೆ ಚ್ಯುತಿ ಬರುವಂತೆ ಬರೆದರೆ ಅದು ಸರಿಯೇ ಎಂಬುದು ಇಲ್ಲಿರತಕ್ಕ ಪ್ರಶ್ನೆ. ಇವತ್ತು ಪತ್ರಿಕಾ ಸಂಪಾದಕರು ಬರೆದಿರುವುದು ಏನಿದೆ ಅದು ಅವರ ವ್ಯಾಪ್ತಿಗೆ ಬರುತ್ತದೆಯೇ ? ಮಾನ್ಯ ಖಾದ್ರಿ ಶಾಮಣ್ಣನವರು ಆ ಪತ್ರಿಕಾ ಸಂಪಾದಕರು.

ಅಧ್ಯಕ್ಷರು.—ಇಲ್ಲಿ ಅವರ ಹೆಸರು ಬಂದಿಲ್ಲ. ಸಂಪಾದಕರು ಎಂದು ಮಾತ್ರ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಯಾರೇ ಸಂಪಾದಕೀಯವನ್ನು ಬರೆದಿದ್ದರೂ ಕೂಡ ಆ ಪತ್ರಿಕಾ ಸಂಪಾದಕರೇ ಅದರ ಪೂರ್ಣ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾಗುತ್ತದೆ. ಇಲ್ಲಿ ಅವರು ಬರೆ ದಿರುವ ಎರಡು–ಮೂರು ಸಾಲುಗಳು ಬಹಳ ಗುರುತರವಾಗಿವೆ. ಅವರು ಏನು ಬರೆದಿದ್ದಾರೆಂದರೆ ;

> "ಈ ಪದ್ಧತಿಯನ್ನು ಟೀಕಿಸುವ ಪ್ರತಿಪಕ್ಷದ ಶೂರರಿಗೆ ಯಾವ ನೀತಿ ಬಲವೂ ಇಲ್ಲ. ಅವರು ಆಡಳಿತದಲ್ಲಿದ್ದ ಕಾಲದಲ್ಲೇ ಈ ಅನಿಷ್ಟ ಆರಂಭ ಆದದ್ದು. ಅವರೆಲ್ಲರೂ ಹಣ ಲಪಟಾಯಿಸಿದವರೇ. ಅಪಾರ ಹಣ ತೆಗೆದುಕೊಂಡು ಈ ಕಾಲೇಜುಗಳಲ್ಲಿ ಸ್ಥಾನಗಳನ್ನು ಹೆಚ್ಚಿಸಿದರು. ಕಾಲೇಜುಗಳಲ್ಲಿ ಸೌಕರ್ಯದ ಮಟ್ಟವನ್ನು ಗಮನಿಸಲಿಲ್ಲ. ಈ ಶುಲ್ಕಕ್ಕೆ ಅಖಂಡ ಅಶೀರ್ವಾದ ನೀಡಿದವರು ಹಿಂದಿನ ಸರ್ಕಾರದವರೇ. ಅವರ ಮಾತಿನಲ್ಲಿ ಈಗ ಯಾವ ಅರ್ಥವೂ ಇಲ್ಲ.

ಎಂದು ಹೇಳಿದ್ದಾರೆ.

ಶ್ರೀ ಎಂ ರಘುಪತಿ.—ಅವರ ಆಡಳಿತ ಕಾಲದಲ್ಲಿ ನಾನು ಇದ್ದೆ ನೀವು ಇರಲಿಲ್ಲ. ಅದು ನಮಗೆ ಅನ್ವಯಿಸುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್. —ಪ್ರತಿಪಕ್ಷದಲ್ಲಿರತಕ್ಕಂಥವರು ಯಾವ ರೀತಿ ಇರಬೇಕು ಎನ್ನುವುದ್ ಕನಗೆ ತಿಳಿದವಂಟ್ಟಿಗೆ ಹೇಳುವುದಾದರೆ, ಮಾನ್ಯ ಮುಖ್ಯಮಂತ್ರಿಗಳು ಯಾವಾಗಲೂ ನಮ್ಮ ಪಕ್ಷದ ಬಗ್ಗೆ ಹೇಳುತ್ತಿರುತ್ತಾರೆ. ಕಮ್ಯುನಿಸ್ಟ್ ಪಾರ್ಟಿಯವರು ಮತ್ತು ಸಿ.ಪಿ.ಐ. ಅವರು ನಮಗೆ ಯಾವಾಗಲು ಫ್ರೆಂಡ್ಲಿ ಅಪೋಸಿಷನ್ ಎಂಬುದಾಗಿ. ಆಂದರೆ ಅವರಿಗೆ ಸರ್ಕಾರ ಉರುಳದೆ ಇರುವಂತೆ ನೋಡಿಕೊಳ್ಳುವುದಕ್ಕೆ ಮತ್ತು ಸರ್ಕಾರ ಮಾಡಿದ್ದನ್ನೆಲ್ಲಾ ಒಪ್ಪಿಕೊಳ್ಳುವುದಕ್ಕೆ ಎಂದು ತಿಳಿದುಕೊಳ್ಳಬಾರದು. ನಾವು ಇರುವುದು, ಒಳ್ಳೆಯದನ್ನು ಮಾಡಿದ್ದರೆ ಒಳ್ಳೆಯದು ಮಾಡಿದ್ದಾರೆಂದು ಹೇಳುವುದಕ್ಕೂ ಮತ್ತು ಕೆಟ್ಟದ್ದನ್ನು ಮಾಡಿದ್ದರೆ ಕೆಟ್ಟದು ಮಾಡಿದ್ದಾರೆಂದು ಹೇಳತಕ್ಕಂಥ ಪಕ್ಷದವರು ನಾವು. ಇಲ್ಲಿ ಪ್ರತಿಪಕ್ಷ ವನ್ನು ಟೀಕೆ ಮಾಡಿದ್ದಾರೆ. ಯಾವುದೇ ನೀತಿ ಇಲ್ಲವೆಂದು ಹೇಳಿದ್ದಾರೆ. ಅದು ನಮಗೂ ಕೂಡ ರಿಫ್ಲೆಕ್ಟ್ ಆಗುತ್ತದೆ. ಕ್ಯಾಫಿಟೇಷನ್ ಫೀಸ್ ತೆಗೆದುಕೊಳ್ಳುವ ಬಗ್ಗೆ ಮಾತನಾಡುವಾಗ ನಾವೂ ಕೂಡ ಟೀಕೆ ಮಾಡಿದ್ದೇವೆ, ವಿರೋಧ ಮಾಡಿದ್ದೇವೆ. ಆ ಕಟೆಂಸ್ಟ್ ಇಟ್ಟುಕೊಂಡು ಹೇಳುವುದಾದರೆ ನಾವು ಖರುವು ದಿಲ್ಲ, ಯಾರು ಆಡಳಿತದಲ್ಲಿ ಇದ್ದರೋ ಅವರೇ ಗಮನಿಸಿಕೊಳ್ಳಲಿ ಎನ್ನುವುದಲ್ಲ. ಅವರು ಹೇಳಿರತಕ್ಕಂಥದ್ದು ಈವತ್ತಿನ ದಿವಸ ಖಂಡಿತವಾಗಿಯೂ ನಮಗೂ ಎಫೆಕ್ಟ್ ಆಗುತ್ತದೆ. ಆದ್ದರಿಂದ ಶಕ್ಧರ್ ಅಂಡ್ ಕೌಲ್ ಪುಸ್ತಕ ಇದೆ. ಪ್ರಿವಿಲೆಜ್ ಬಗ್ಗೆ ರೂಲ್ಸ್ ಆಫ್ ಪ್ರೊಸೀಜರ್ ಬಗ್ಗೆ ಅದರಲ್ಲಿ ಏನು ಹೇಳಿದ್ದಾರೆ ಎಂದರೆ ಪೇಜ್ ೨೨೩ ಮತ್ತು ವಾಲ್ಯೂಮ್ ನಂಬರ್ ಒಂದರಲ್ಲಿ

> "It is a breach of privilege and contempt of the House to make speches, or to print or publish any libels reflecting on the character or proceedings of the House or its committees, or any member of the House for or relating to his character or conduct as a member of Parliament.
>
> Speeches and writings reflecting on the House or its committees or members are punished by the House as a contempt on the principle that such acts "tend to obstruct the Houses in the performance of their functions by diminishing the respect due to them."

'Respect that is due them' that is important. If there is anything that is mis-stated by the members, naturally it affects the privilege of the members. I am not looking at it from the point of view of Sri Moily, or Sri Ranganath or anybody. It is a question of upholding the dignity of this House. It may be to-day they are ruling and to-morrow these people may jump that side and rule. I do not know The point is that are you going to uphold the dignity of the House by writing like this. You have not upheld the dignity of the House, that is what it says. All these cases of Mulgavankar. Prathi Paksha and Hindustan Times are there. I do not want to get into the case laws here. The most important point is that the dignity of the House is lowered by stating like this. They have a right to criticise. But, they have no right to bring down the dignity of the House. They have brought my party. Communist party has nothing to do at all in regard to the allegations that have been made here. It is very wrong. That is why I request that it be sent to the Privileges Committee.

ಶ್ರೀ ಕೆ. ಎಚ್. ರಂಗನಾಥ್. (ಹಿರಿಯೂರು). — ಮಾನ್ಯ ಅಧ್ಯಕ್ಷರೇ ಈ ಸಭೆಯ ಮುಂದೆ ಗಂಭೀರವಾದ ಪ್ರಶ್ನೆ ಇದೆ. ಪ್ರಸ್ತುತ ಪಶ್ನೆಯಿಂದ ಈ ಸದನಕ್ಕೆ ಹಕ್ಕುಚ್ಯುತಿಯಾಗಿದೆ. ಸದನದ ಹಕ್ಕು

ಚ್ಯುತಿಯಾಗಿದೆಯೇ ಇಲ್ಲವೇ. ಹಕ್ಕುಚ್ಯುತಿಯಾಗಿದ್ದರೆ ಕಾನೂನು ಪ್ರಕಾರ ಏನು ಮಾಡಬೇಕು ಎನ್ನುವ ವಿಷಯಕ್ಕೆ ಮಾತ್ರ ಸೀಮಿತವಾಗಿದೆ. ಮಾನ್ಯ ಮಿತ್ರರಾದಂಥ ಕೃಷ್ಣನ್‌ರವರು ಹೇಳಿದಂಥ ಮಾದವನ್ನು ಪೂರ್ಣವಾಗಿ ನಾನು ಅನುಮೋದಿಸುತ್ತೇನೆ. ಆದನ್ನು ನಾನು ಓದಿದ್ದೇನೆ. ಏನು ಓದಿದ್ದೇನೆ ಅದನ್ನು ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ನಾನೂ ಕೂಡ ಈ ಮಸೂದೆಯ ಬಗ್ಗೆ ಮಾತನಾಡಬೇಕೆಂದು ಹೆಸರನ್ನು ಕೊಟ್ಟಿದ್ದೆ. ಈವತ್ತಿನ ದಿವಸ ಸಭೆಯ ಮುಂದೆ ಯಾವಾಗ ಮಸೂದೆ ಕರಡು ರೂಪದಲ್ಲಿ ಬಂದಿತೋ ಆವಾಗ ನಮ್ಮ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ನಮಗೆ ಅಧಿಕಾರವಿರುತ್ತದೆ, ಅದು ನಮ್ಮ ಆದ್ಯಕರ್ತವ್ಯವೂ ಕೂಡ ಆಗಿರುತ್ತದೆ. ಅದು ನಮ್ಮ ಹಕ್ಕು ಕೂಡ ಆಗಿರುತ್ತದೆ. ಇಲ್ಲಿಯವರೆಗೆ ಇಂಥ ಒಂದು ವಿಷಯ ಬಂದಿರಲಿಲ್ಲ. ಒಂದಂ ಎಕ್ಸಿಕ್ಯುಟೀವ್ ಆರ್ಡರ್ ಸರ್ಕಾರದ ಮುಂದೆ ಶುಲ್ಕ ವಸೂಲು ಮಾಡತಕ್ಕಂಥ ಕ್ರಮ ಏನು ಇದೆ ಅದು ಮಂತ್ರಿಮಂಡಲದ ಮುಂದೆ ಬರತಕ್ಕಂಥ ಪರಿಸ್ಥಿತಿ ಇರಲಿಲ್ಲ. ಇದರ ಬಗ್ಗೆ ಹೆಚ್ಚಿಗೆ ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುವುದಿಲ್ಲ. ಕರಡು ಮಸೂದೆ ಬಂದ ಮೇಲೆ, ಮಸೂದೆಯ ತಿರೋನಾಮೆ ರದ್ದು ಮಾಡತಕ್ಕಂಥ ಅಭಿಪ್ರಾಯ ಬಂದ ಮೇಲೆ ನಾವು ಅಲ್ಲೂ ಕೂಡ ಸ್ವಾಗತ ಮಾಡಿದ್ದೇವೆ. ವೈಯಕ್ತಿಕವಾದ ನಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದ್ದೇವೆ. ಪಕ್ಷದ ವತಿಯಿಂದ, ಬೇರೆಯವರು ಏನೇ ಇರಲಿ ತತ್‌ಕ್ಷಣ ರದ್ದು ಮಾಡತಕ್ಕಂಥ ಅಭಿಪ್ರಾಯ ಉಳ್ಳಂಥ ನಾವು... ನಾನು ಸದಸ್ಯನಾಗಿ. ಮಂತ್ರಿಯಾಗಿ ಯಾರಿಗೂ ನನ್ನ ಅಧಿಕಾರದ ಅವಧಿಯಲ್ಲಿ ಒಂದು ಸೀಟನ್ನು ಕೊಡಿಸಿದವನು ನಾನಲ್ಲ. ಯಾರಿಂದಲೂ ಹಣವನ್ನು ಲಪಟಾಯಿಸಿದವನು ನಾನಲ್ಲ. ಮಾನ್ಯ ಕೃಷ್ಣನ್‌ರವರು ಸ್ಪಷ್ಟವಾಗಿ ಹೇಳಿದ್ದಾರೆ. ಅದು ಹೇಗಾದರೂ ಇರಲಿ. ಪ್ರತಿ ಪಕ್ಷದ ಶಾಸಕರಾದ ಮಾನ್ಯ ಕೃಷ್ಣನ್‌ರವರು, ಮಾನ್ಯ ವಿ. ಎಸ್., ಆಚಾರ್ಯರವರು ಮಾತನಾಡಿದ್ದಾರೆ. ಮಾನ್ಯ ಬಂಗಾರಪ್ಪನವರು, ಮಾನ್ಯ ವೀರಪ್ಪಮೊಯಿಲಿಯವರೂ ಮಾತನಾಡಿದ್ದಾರೆ. ನಾನೂ ಕೂಡ ಮಾತನಾಡಬೇಕೆಂದು ಇದ್ದೆ, ಹಾಗಾದರೆ ನನ್ನ ಅಭಿಪ್ರಾಯವನ್ನು ಹೇಳತಕ್ಕಂಥದ್ದು ಸರಿಯಿಲ್ಲವೇ. ಮತ್ತೆ ಇಲ್ಲಿ ನನ್ನ ಪಕ್ಷಕ್ಕೇ ಸಂಬಂಧಪಟ್ಟಂತೆ ಒಂದು ಮಾತು ಇದೆ. ಅವರ ಆಡಳಿತ ಕಾಲದಲ್ಲಿ ಎಂದು ಹೇಳುವಾಗ, ಆ ವಾಕ್ಯ ಅದರ ವ್ಯಾಪ್ತಿ ವಿಸ್ತಾರವಂಥ ಒಂದು ಮಾತಾಗುತ್ತದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ನೆನೆಸಿಕೊಳ್ಳಬೇಕಾಗುತ್ತದೆ. ವಿವಂಗತ ಪಾವಟಿಯವರು ಹುಬ್ಬಳ್ಳಿಯಲ್ಲಿ ಕರ್ನಾಟಕ ಯೂನಿವರ್ಸಿಟಿಗೆ ಆಫಿಲಿಯೇಷನ್ ಕೊಡತಕ್ಕಂಥ ಸಂದರ್ಭದಲ್ಲಿ ಕೊಡಲಿಲ್ಲ ಮೈಸೂರು ಯೂನಿವರ್ಸಿಟಿ ಆಫಿಲಿಯೇಷನ್ ತೆಗೆದುಕೊಂಡು ಕಾಲೇಜು ಪ್ರಾರಂಭ ಮಾಡಿದರು ಅದಕ್ಕೂ ಮೊದಲು ಮಣಿಪಾಲ್ ಕಾಲೇಜ್ ಪ್ರಾರಂಭವಾಯಿತು. ತದ ನಂತರ ಬಾಕಿ ಕಾಲೇಜುಗಳು ಆದುವು. ಹೀಗೆ ಅದರ ಹುಟ್ಟನ್ನು ನೋಡುತ್ತಾ ಹೋದರೆ ಯಾರ ಯಾರ ಕಾಲದಲ್ಲಿ ಏನೇನಾಯಿತು ಎನ್ನತಕ್ಕಂಥ ವಿಷಯ ಬೇಕಾಗಿಲ್ಲ. ಆ ಕಾಲದಲ್ಲಿ ಸ್ವಲ್ಪ ಜಾಸ್ತಿಯಾಗಿ ರಬಹುದು. ಈಗ ಸ್ವಲ್ಪ ಕಡಿಮೆಯಾಗಿರಬಹುದು. ಅದಕ್ಕೋಸ್ಕರವಾಗಿ ಈ ಅನಿಷ್ಟ ಪದ್ಧತಿಯನ್ನು ಪ್ರಸ್ತಾಪ ಮಾಡಿ ವೈಯಕ್ತಿಕವಾಗಿ ಹೇಳಲು ಅವರಿಗೇನು ಹಕ್ಕಿದೆ? ನಾವು ಈ ರೀತಿ ಮಾತನಾಡಲು ಹಕ್ಕಿಲ್ಲವೆಂದು ಅಗ್ರಲೇಖನದಲ್ಲಿ ಬರೆದಿದ್ದಾರೆ. ಆ ರೀತಿ ಬರೆಯಲು ಅವರಿಗೇನು ಹಕ್ಕು? ಇದರಿಂದ ಸದನಕ್ಕೆ ಹಕ್ಕುಚ್ಯುತಿ ಉಂಟಾದಂತಾಗಿದೆ. ಸದಸ್ಯರಿಗೆ ಹಕ್ಕುಚ್ಯುತಿ ಮಾಡಿದಂತಾಗಿದೆ. ಆದ್ದರಿಂದ ಶೆಕ್ಸ್‌ರ್ ಮತ್ತು ಕೌಲ್ ಪುಸ್ತಕದಲ್ಲಿ ಸ್ಪಷ್ಟ ಮಾಡಿದ್ದಾರೆ. ನಾವು ಸಾರ್ವಜನಿಕ ರಸ್ತೆಯಲ್ಲಿ ಹೋಗುವಾಗ ನಮ್ಮನ್ನು ಏನೆನ್ನುತ್ತಾರೆ. ಇವರು ಕಾಂಗ್ರೆಸ್ ಪಕ್ಷದಲ್ಲಿದ್ದವರೆಂದು ನಾಲ್ಕು ಜನ ಮಾತನಾಡುವುದಕ್ಕೆ ಸಾಧ್ಯತೆ ಇದೆ. It affects my dignity. Therefore it is the responsibility of this August House to protect my dignity and my dignity at nox cost should be lowered and it is your duty to protect the dignity of this House, not only of Ranganath. ಈ ದೃಷ್ಟಿಯಿಂದ ನೋಡಿದರೆ ನೇರವಾಗಿ ಪ್ರಿವಿಲೇಜ್ ಸಮಿತಿಗೆ ಕಳುಹಿಸಿಕೊಡಲು ಅವಕಾಶವಿದೆ; ಆದ್ದರಿಂದ ಇದರ ಬಗ್ಗೆ ಹೆಚ್ಚಿಗೆ ಪ್ರಸ್ತಾಪ ಮಾಡುವುದು ಅನಿವಾರ್ಯವಾಗುತ್ತದೆ. ಇದರಲ್ಲಿ ಸ್ವಚ್ಛವಾದ ಅಭಿಪ್ರಾಯವಿದೆ. ಇದರ ಹಿನ್ನೆಲೆಯಲ್ಲಿ ಅದರ ಅರ್ಥವನ್ನು ನೋಡಿ ವಿಶ್ಲೇಷಣೆ ಮಾಡತಕ್ಕಂಥದ್ದು ಅನಗತ ಎನ್ನುವ ಮಾತನ್ನು ಹೇಳಿ ಇದಕ್ಕೆ ಬೇರೆ ಯಾವುದೇ ಅವಕಾಶವನ್ನು ಕೊಡದೆ ನೇರವಾಗಿ ಪ್ರಿವಿಲೇಜ್ ಸಮಿತಿಗೆ ಕಳುಹಿಸಿಕೊಡಬೇಕೆಂದು ಹೇಳುತ್ತೇನೆ.

ಒಂದು ವೇಳೆ ಈ ಪತ್ರಿಕೆಯ ಸಂಪಾದಕರ ಹತ್ತಿರ ಈ ಬಗ್ಗೆ ಸಾಕ್ಷಿ ಇದ್ದರೆ ನಾವು ಹಣ ಲಪಟಾಯಿಸಿರುವುದೂ ನಿಜವಾಗಿದ್ದರೆ ಅವರು ಈ ಸಮಿತಿಯ ಮುಂದೆ ಬಂದು ಹೇಳಲಿ. because

it is libel. If it is truth he is not going to be affected by that Supposing it is not a fact then he is going to be punished by the Ptivilege Committee. ಆದರಿಂದ ಇದನ್ನು ತಾವು ನೇರವಾಗಿ ಹಕ್ಕು ಬಾಧ್ಯತೆಗಳ ಸಮಿತಿಗೆ ಕಳುಹಿಸಬೇಕು. ಈ ರೀತಿ ಕಳುಹಿಸುವುದರ ಮೂಲಕ ತಾವು ಈ ಸದನದ ಹಕ್ಕನ್ನು ಮತ್ತು ಈ ಸದನದ ಸದಸ್ಯರ ಹಕ್ಕನ್ನು ಕಾಪಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ. ಈ ವಿಚಾರದಲ್ಲಿ ಮಾನ್ಯ ಸದಸ್ಯರ ಹಕ್ಕಿಗೆ ಚ್ಯುತಿ ಬಂದಿದೆ ಎನ್ನುವ ವಿಷಯದ ಬಗ್ಗೆ ಸಾಕಷ್ಟು ಚಿಂತನೆ ನಡೆದಿದೆ ಎಂದು ನನ್ನ ಭಾವನೆ. ಇಲ್ಲಿ ಮುಖ್ಯವಾಗಿ ನಾವು ಗಮನದಲ್ಲಿಟ್ಟುಕೊಳ್ಳಬೇಕಾದಂಥ ವಿಚಾರವೆಂದರೆ, ಈ ಪತ್ರಿಕೆಯ ಸಂಪಾದಕರು ಬಳಸಿರತಕ್ಕಂಥ ಕೆಲವು ವಾಕ್ಯಗಳು.

ಶ್ರೀ ಕೆ. ಹೆಚ್. ರಂಗನಾಥ್.—ಹಾಗು ಕೆಲವು ಪದಗಳು.

ಶ್ರೀ ಎ. ಲಕ್ಷ್ಮೀಸಾಗರ್.—ವಾಕ್ಯಗಳಲ್ಲಿ ಪದಗಳು ಸೇರಿರುತ್ತವೆ. ಆದ್ದರಿಂದ ಇಲ್ಲಿ ಬಳಸಿರ ತಕ್ಕಂಥ ಕೆಲವು ವಾಕ್ಯಗಳಿಂದ ಈ ಸಭೆಯ ಸದಸ್ಯರ ಹಕ್ಕಿಗೆ ಮತ್ತು ಈ ಸಭೆಯ ಹಕ್ಕು ಭಾಧ್ಯತೆಗೆ ಚ್ಯುತಿ ಬಂದಿದೆ ಎಂದು ಹೇಳಿದ್ದಾರೆ. ಈ ಸಭೆಯ ಸದಸ್ಯರುಗಳಿಗೆ ಕೆಲವು ವಿಶೇಷವಾದಂಥ ಅವಕಾಶ ಗಳು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಇವೆ. ಆದ್ದರಿಂದ ಸಾರ್ವಜನಿಕ ವಿಚಾರಗಳನ್ನು ನಿರ್ಭೀತವಾಗಿ ಇಲ್ಲಿ ಚರ್ಚೆ ಮಾಡಲು ಒಂದು ಪ್ರತ್ಯೇಕವಾದಂಥ ಅವಕಾಶವಿದೆ. ಈ ಒಂದು ಚೌಕಟ್ಟಿನಲ್ಲಿ ನಾವು ಪರಿಣಾಮಕಾರಿಯಾಗಿ ಹಾಗೂ ನಿರ್ಭಯವಾಗಿ ಕೆಲಸ ಮಾಡುವುದಕ್ಕೆ ಅವಕಾಶವಿರುವಾಗ ಇಂತಹ ಅವಕಾಶಗಳನ್ನು ನಾವು ಉಪಯೋಗಿಸಿಕೊಂಡು ಇಲ್ಲಿ ಬರತಕ್ಕಂಥ ಅನೇಕ ವಿಷಯಗಳ ಮೇಲೆ ಚರ್ಚೆ ಮಾಡಬಹುದಾಗಿದೆ ಮತ್ತು ನಮ್ಮ ಅಭಿಪ್ರಾಯಗಳನ್ನು ತಿಳಿಸಬಹುದಾಗಿದೆ. ಇಂತಹ ಒಂದು ಅವಕಾಶ ವಿದ್ದರೂ ಸಹ ಈ ಪತ್ರಿಕೆಯ ಸಂಪಾದಕೀಯದಲ್ಲಿರುವಂತಹ ಕೆಲವು ವಾಕ್ಯಗಳಿಂದ ಸದಸ್ಯರ ಹಕ್ಕಿಗೆ ಚ್ಯುತಿ ಬಂದಿದೆ ಎಂಬುದು ಮೂಲವಾದ ವಿಷಯ ಮತ್ತು ಆರೋಪದ ವಿಷಯವಾಗಿದೆ. ಈ ಬಗ್ಗೆ ನನ್ನ ಎರಡು ಅಭಿಪ್ರಾಯಗಳನ್ನು ತಮ್ಮ ಮುಂದಿಡುತ್ತೇನೆ. ಇಲ್ಲಿರುವಂತಹ ಒಂದು ವಾಕ್ಯವಾಗಲೀ ಅಥವಾ ಎರಡೂ ವಾಕ್ಯಗಳಾಗಲೀ, ಇದನ್ನು ಸಮಗ್ರವಾದಂಥ ವಾಕ್ಯ ಕೋಶದಲ್ಲಿ ವಿಶ್ಲೇಷಣೆ ಮಾಡಿದರೆ ಅನಾಹುತಕ್ಕೆ ಒಳಗಾಗುತ್ತದೆಂದು ಹೇಳುತ್ತೇನೆ. ಈ ಸಂಪಾದಕೀಯವನ್ನು ನಾನು ಪೂರ್ತಿಯಾಗಿ ಓದಿದ್ದೇನೆ. ಈ ಸಂಪಾದಕೀಯವನ್ನು ಯಾವ ಹಿನ್ನೆಲೆಯಲ್ಲಿ, ಯಾವ ಅರ್ಥದಲ್ಲಿ ಮತ್ತು ಯಾವ ಒಂದು ಉದ್ದೇಶದಿಂದ ಬರೆದಿದ್ದಾರೆ ಮತ್ತು ಇದರ ಸಂಪೂರ್ಣಉದ್ದೇಶ ಏನು ಎಂಬುದನ್ನು ಸಂಪಾದಕರು ಓದುಗರಿಗೆ ತಿಳಿಸುವುದಕ್ಕೆ ಪ್ರಯತ್ನಪಟ್ಟಿದ್ದಾರೆಂಬ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ನಾನು ಮೊದಲಿಗೆ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಈ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ ಈ ವಾಕ್ಯಗಳು ಮಾನ್ಯ ಸದಸ್ಯರ ಹಕ್ಕು ಚ್ಯುತಿಗೆ ಅಡ್ಡಿ ಬರುತ್ತವೆಯೇ ಅಥವಾ ಇಲ್ಲವೇ ಎಂಬುದನ್ನು ನಿಷ್ಕರ್ಷೆ ಮಾಡುವುದಕ್ಕೆ ಸಹಾಯವಾಗುತ್ತದೆ. ಇದು ನನ್ನ ಮೊದಲನೆಯ ಭಾಗದ ಅಭಿಪ್ರಾಯವಾಗಿದೆ.

ಇನ್ನು ಎರಡನೇ ಅಭಿಪ್ರಾಯವೆಂದರೆ, ಪ್ರಜಾಪ್ರಭುತ್ವದ ತತ್ವದ ಅಡಿಯಲ್ಲಿ ರಾಜಕೀಯ ಪಕ್ಷ ಗಳು ಈ ಸಭೆಯಲ್ಲಿ ಹಾಗೂ ಇತರೇ ಸಂಘ ಸಂಸ್ಥೆಗಳಲ್ಲಿ ಕೆಲಸಮಾಡುವ ವಿಚಾರದಲ್ಲಿ ಸಾಕಷ್ಟು ಬರವಣಿಗೆ ಗಳು ಬಂದಿವೆ. ಕಟುವಾದ ಮತ್ತು ವ್ಯಂಗ್ಯವಾದಂಥ ಬರವಣಿಗೆಗಳೂ ಸಹ ಬಂದಿವೆ. ನಮ್ಮ ಓರೆ ಕೋರೆಗಳನ್ನು ತೋರಿಸುವಂತಹ ಬರವಣಿಗೆಗಳು ಬಂದಿವೆ. ಆದ್ದರಿಂದ ಇಂತಹ ಬರವಣಿಗೆ ಇದೇ ಮೊದಲನೆಯ ಸಲ ಬಂದಿರುವುದು ಎಂದು ಹೇಳುವುದಕ್ಕಾಗುವುದಿಲ್ಲ. ಇಂತಹ ಬರವಣಿಗೆಗಳ ಮೇಲೆ ಬಂದಿರುವಂತಹ ತೀರ್ಮಾನಗಳೂ ಸಹ ನಮ್ಮ ಕೈಯಲ್ಲಿವೆ. ಇದರ ಜೊತೆಗೆ ಹಿಂದಿನ ಅನುಭವದ ವಿಷಯಗಳೂ ಸಹ ನಮ್ಮಲ್ಲಿವೆ. ಇವೆಲ್ಲವುಗಳಿಂದ ಈ ಒಂದು ವಿಷಯದ ಬಗ್ಗೆ ತೀರ್ಮಾನ ಕೈಕೊಳ್ಳಲು ಸಹಾಯವಾಗಬೇಕು ಎನ್ನುವ ಮಾತನ್ನು ತಮಗೆ ಹೇಳುತ್ತಿದ್ದೇನೆ ಇದನ್ನು ನಾನ್ನು ಲಂಬಿಸುವುದಕ್ಕೆ ಹೋಗುವುದಿಲ್ಲ. ಇದೇ ಸಂದರ್ಭದಲ್ಲಿ ನಾನು...

ಶ್ರೀ ಎಂ. ಎಸ್. ಕೃಷ್ಣನ್.—ತಾವು ಸಹಕಾರಿ ಅಂಡ್ ಶೆಕ್ಸರ್ ಪುಸ್ತಕದಲ್ಲಿರುವುದನ್ನೇ ಹೇಳಲು ಹೊರಟಿದ್ದೀರಿ.

ಶ್ರೀ ಎ. ಲಕ್ಷ್ಮಿಸಾಗರ್.—ಹೌದು. ಇದು ಭಗವದ್ಗೀತೆ ಇದ್ದಂತೆ. ಇದರಲ್ಲಿರುವುದು ಕೃಷ್ಣನಿಗೆ ಒಂದು ತರಹ ಕಂಡರೆ ಅರ್ಜುನನಿಗೆ ಇನ್ನೊಂದು ತರಹ ಕಾಣುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಉರ್ದುನಲ್ಲಿ ಒಂದು ಗಾದೆ ಇದೆ. ಆದರಂತೆ ನಾವು ಮಾತನಾಡುವಾಗ ಸಾವಿರ ಹೇಳಿಬಹುದು. ಆದರೆ ಬರೆಯುವಾಗ ನೋಡಿಕೊಂಡು ಬರೆಯಬೇಕಾಗುತ್ತದೆ.

ಶ್ರೀ ಎ ಲಕ್ಷ್ಮಿಸಾಗರ್.—ನನಗೆ ಉರ್ದು ಗಾದೆ ವಿಚಾರ ಗೊತ್ತಿಲ್ಲ. ಆದರೆ ಭಗವದ್ಗೀತೆಯಲ್ಲಿರುವ ವಿಚಾರಗಳನ್ನು ಕೇಳಿದ್ದೇನೆ. 'ಕೃಷ್ಣನ ವಿಚಾರದಲ್ಲಿ 'ಯತೋ ಕೃಷ್ಣ ತತೋ ಜಯ'. ಎಂದು ಹೇಳುತ್ತಾರೆ. ಇದರಲ್ಲಿ ಹೇಳಿರುವುದನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಆದರೂ ಇದರ ಮೇಲೆ ವಾದ ಮಾಡಲು ಹೋದರೆ ಅದು ಬೀಜ ವೃಕ್ಷ ನ್ಯಾಯದಂತೆ ಆಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಮದುವೆಯೇ ಆಗದಿರುವ ತಪ್ಪಿಗೆ ಇದೆಲ್ಲಾ ಏಕೆ ಬೇಕು ?

ಶ್ರೀ ಎ. ಲಕ್ಷ್ಮಿಸಾಗರ್.—ನನಗೆ ಮದುವೆ ಆಗಿಲ್ಲ. ಇಲ್ಲಿ ಮದುವೆಯಾದವರು ಮೆಜಾರಿಟಿಯಲ್ಲಿದ್ದಾರೆ. ಆದ್ದರಿಂದ ಇದನ್ನು ಓಟಿಗೆ ಹಾಕಿದರೆ ನನಗೆ ರಕ್ಷಣೆ ಸಿಗದೆ ಹೋಗಬಹುದು.

ಅಧ್ಯಕ್ಷರು.—ನಮ್ಮ ರಕ್ಷಣೆ ನಿಮಗಿದೆ.

ಶ್ರೀ ಎ. ಲಕ್ಷ್ಮಿಸಾಗರ್.—ನನ್ನ ರಕ್ಷಣೆಗೆ ಈ ಭಗವದ್ಗೀತೆ ಒಂದೇ ಇರುವುದು. ನಾನು ಮೊದಲೇ ಹೇಳಿದಂತೆ ಇದನ್ನು ಲಂಬಿಸಿ ಹೇಳಲು ಹೋಗುವುದಿಲ್ಲ. ಇಂತಹ ಟೀಕೆಗಳು ಆಗಾಗ್ಗೆ ಬರುತ್ತವೆ. ಈ ಸಭೆಯ ಕಾರ್ಯ ಕಲಾಪಗಳನ್ನು ಪತ್ರಿಕೆಗಳು ಶಿರೋನಾಮೆಕೊಟ್ಟು ಪ್ರಕಟ ಮಾಡುತ್ತವೆ. ಈ ಕಾರಣದಿಂದ ಇಲ್ಲಿನ ಸಂಪಾದಕೀಯದಲ್ಲಿರುವಂತಹ ವಾಕ್ಯಗಳಿಂದ ಈ ಸಭೆಯ ಸದಸ್ಯರ ಹಕ್ಕಿಗೆ ಚ್ಯುತಿಯಾಗಿದ್ದರೆ ಅವರ ಮೇಲೆ ಕ್ರಮ ಕೈಕೊಳ್ಳುವುದಕ್ಕೆ ಅವಕಾಶವಿದೆ. ಈ ಸಂಪಾದಕೀಯದಲ್ಲಿರುವ ಕೆಲವು ವಾಕ್ಯಗಳಿಂದ ಸದಸ್ಯರ ಹಕ್ಕಿಗೆ ಚ್ಯುತಿಯಾಗಿದೆ ಎಂದು ಕೆಲವರು ಹೇಳಿದ್ದಾರೆ. ಈ ವಿಚಾರದಲ್ಲಿ ಕಾಲ್-ಅಂಡ್ ಶಕ್ದರ್ ಗ್ರಂಥದಲ್ಲಿ [illegible]ಹೇಳಿರುವಂತಹ ೨-೩ ವಾಕ್ಯಗಳನ್ನು ಮಾತ್ರ ಇಲ್ಲಿ ಓದಿ ಹೇಳುತ್ತೇನೆ. ಇದರಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಸಾಕಷ್ಟು ನಿದರ್ಶನಗಳಿವೆ. ಆದರೆ ಒಂದು ನಿದರ್ಶನವನ್ನು ಮಾತ್ರ ತಮ್ಮ ಮುಂದೆ ಓದಿ ಹೇಳುತ್ತೇನೆ. Strong words don't break bones ಎನ್ನುವಂತಹ ಒಂದು ಮಾತಿದೆ. There is a famous judgment by the Supreme Court.

ಆದ್ದರಿಂದ.....

Sri K. H. Ranganath.—If the words are positively put then what happens ? ಎಲ್ಲರೂ ಹಣ ಲಪಟಾಯಿಸಿದವರೇ ಎಂದು ಇದರಲ್ಲಿದೆ.

ಶ್ರೀ ಎ. ಲಕ್ಷ್ಮಿಸಾಗರ್.—ಇದರಲ್ಲಿ ಏನು ಹೇಳಿದ್ದಾರೆಂಬ ವಿಚಾರ ನನ್ನ ಮುಂದೆ ಸಹ ಇದೆ. ಇಲ್ಲಿ ನಾವು ಒಂದು ವಿಷಯವನ್ನು ತಿಳಿದುಕೊಳ್ಳಬೇಕು. ಅದೇನೆಂದರೆ, ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಒಳಗಡೆ ಮತ್ತು ಹೊರಗಡೆ ಓಡಾಡುವಂತಹ ಜನರೆಲ್ಲರೂ ಸಹ ಸಾರ್ವಜನಿಕರ ಟೀಕೆಗಳಿಗೆ ಒಳಗಾಗಬೇಕಾಗುತ್ತದೆ. ವಾಚ್ಯ ಮತ್ತು ಅವಾಚ್ಯ ಶಬ್ದಗಳಿಂದ ಮಾತನಾಡುತ್ತಾರೆ, ರಾಜಕೀಯದಲ್ಲಿರುವವರ ಬಗ್ಗೆ ನಾನಾ ರೀತಿಯಿಂದ ಮಾತನಾಡುತ್ತಾರೆ. ಪತ್ರಿಕೆಗಳಲ್ಲೂ ಸಹ ನಾನಾ ರೀತಿಯಿಂದ ಬರೆಯುತ್ತವೆ. ಈ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ನಮ್ಮನ್ನು ಮೆಚ್ಚುವವರೂ ಸಹ ಇದ್ದಾರೆ ಮತ್ತು ಟೀಕೆ ಮಾಡುವವರೂ ಸಹ ಇದ್ದಾರೆ. ವ್ಯಂಗ್ಯವಾಗಿ ಮಾತನಾಡುವವರೂ ಸಹ ಇದ್ದಾರೆ. ಆದ್ದರಿಂದ ನಾವು ಎಲ್ಲರನ್ನೂ ಮೆಚ್ಚಿಸುವ ರೀತಿಯಲ್ಲಿ ಕೆಲಸ ಮಾಡುವುದು ಕಷ್ಟವಾಗುತ್ತದೆ.

೧-೫೦ಪಿ.ಎಂ.

ಈ ಸಭೆಯಂ ಕೆಲಸ ಮಾಡತಕ್ಕಂತಹ ರೀತಿಯಲ್ಲಿ ಸದಸ್ಯರಿಗೆ ತಮ್ಮ ಕರ್ತವ್ಯ ನಿರ್ವಹಣೆಗೆ ಅಡ್ಡಿ ಬಂದು ಕುಂದುಂಟಾಗಿದೆ ಎನ್ನತಕ್ಕ ಮೂಲಭೂತವಾದ ಹಕ್ಕುಚ್ಯುತಿ ನಿರ್ಣಯದ ಬಗ್ಗೆ ತೀರ್ಮಾನವಾಗಬೇಕಾಗಿರುವ ವಿಚಾರ ನಮ್ಮ ಮುಂದಿದೆ. ಮೇಲ್ನೋಟಕ್ಕೆ ಸಾಬೀತು ಆಗಿದೆ, ಸರಕಾರಗಳ ಜೋಡಣೆ ವಿಸ್ತಾರವಾದ ತಿಳುವಳಿಕೆಯಂ ಒಂದು ಅಭಿಪ್ರಾಯಕ್ಕೆ ಬಂದು ಮುಂದೆ ಹೋಗುವುದಕ್ಕೆ ಕಾನೂನುಗಳು ನಡವಳಿಕೆಗಳಂ ಇವೆ. ನನ್ನ ದೃಷ್ಟಿಯಲ್ಲಿ ಹಾಗೆ ಇಲ್ಲಾ, ಇಲ್ಲಿರತಕ್ಕ ಕೆಲವರಿಗೆ ಪ್ರಿಯಂವಾಗಿರಬಹುದು,

ಸರಿಯಾಗಿ ಕಾಣದೆ ಇರಬಹುದು ಈ ತರಹ ಅಭಿಪ್ರಾಯಗಳು ಉಂಟು, ನಾನು ಇಲ್ಲವೆಂದು ಹೇಳುವುದಿಲ್ಲ. ನಾನು ಇದರ ಬಗ್ಗೆ ಒಂದು ವಾಕ್ಯ ಓದುತ್ತೇನೆ.

> "This indicates in Loka Sabha where one political leader was reported in newspaper to have said in the public speech that the representatives of a political party in the legislatures were people whom any Firt Class Magistrate would round up and were men without any appraciable means of livelihood".

This is a sentence purported to have been reported in a newspaper uttered by a political party leader in respect of another political party in legialsture This is in respect of a political party and members thereof. Similar is the situation here and therefore what is purported to be the words which could be termed as words of breach of privilege of the House or Members thereof, they don't constitute as matters coming within the mischief of Rule 191. This is my submission.

By way of explanation, one point is raised i.e., defamation, libel etc., I would very humbly submit to the consideration of the Hon'ble Member Sri Ranganath who had a chequered career as Minister, as a political party leader ond lastly as the presiding diety of this House. "All Lawyers are lieas", is it defamatory? Has this been considered by the Courts as defamatory?

SRI K. H. RANGANATH.—If the Hon'ble Member were to yield...

SRI A. LAKSHMI SAGAR.—I did not interrupt when he was speaking. Has this been considered by any Court? Any characterisation however defamatory it may be, the characterisation is or in respect of a class of persons; may be politicians, may be legislators, may be parliament members, may be others it does not constitute defamation This is my submission.

MR SPEAKER.—Does it constitute the breach of privilege is the question?

SRI A. LAKSHMI SAGAR.—In view of the observation made in Lok Sabha in respect of a similar matter, it does not amount to breach of privilege. Therefore, whatever may be the arguement whatever may be the severity of the logic in order to bring home the poins of breach of priviliege, it does not carry much weight inview of the facts of this case and therefore, my submission is the matter now raised is not a matter which can be brought with any sense of reasonableness within the mischief of Rule 191 and therefore, it shall not be taken not of.

ಶ್ರೀ ಕೆ ಎಚ್, ರಂಗನಾಥ್ .—ಮಾನ್ಯಮಂತ್ರಿಗಳು ಈ ಸದನದ ಸದಸ್ಯರಾಗಿ ನಮ್ಮ ಸಹಾಯಕ್ಕೆ ಬರುತ್ತಾರೆಂದು ನಾನು ಭಾವಿಸುತ್ತೇನೆ, ಅವರ ಅಭಿಪ್ರಾಯವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಇಂತಹ ವಿಷಯಗಳು ಬಂದಾಗ ಪಕ್ಷ ಪಂಗಡ ನೋಡಬಾರದೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಆ ದೃಷ್ಟಿಯಿಂದ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ ತಾವು [ಈಗ ಓದಿದ ಕೇಸು ಹೊರಗಡೆ ಭಾಷಣ ಮಾಡಿದಂತಹದ್ದನ್ನು ಈ ಸಭೆಯಲ್ಲಿ ಹೇಳಿದ್ದೀರಿ ಸಂಪಾದಕೀಯ ಬರೆಯುವಾಗ ಸಭೆಯಲ್ಲಿ ಮಾತನಾಡುವ ಸದಸ್ಯರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ತಮ್ಮ ಅಭಿಪ್ರಾಯ ಸೇರಿಸಿಕೊಂಡು ಒಂದು ಅಗ್ರಲೇಖನ ಬರೆದಿದ್ದಾರೆ. ಆ ಅಗ್ರಲೇಖನ ಬರೆಯುವಾಗ ಪ್ರಸ್ತಾಪ ಮಾಡಿದ್ದಾರೆ. ರಾಜಕೀಯ ಪಕ್ಷಗಳನ್ನು ಪ್ರಸ್ತಾಪ ಮಾಡಿದ್ದಾರೆ, ಅದರಲ್ಲಿ ಏನೋ ಒಂದು ತರಹ ಲಘುವಾಗಿ ಬರೆದಿದ್ದಾರೆ. ಎಲ್ಲರೂ ಲಪಟಾಯಿಸಿದ್ದಾರೆ. ಅಂದರೆ ಕಾಂಗ್ರೆಸ್ ಪಕ್ಷದವರೆಲ್ಲರೂ.

ಶ್ರೀ ಲಕ್ಷ್ಮೀಸಾಗರ್ .— ಕಾಂಗ್ರೆಸ್‌ಪಕ್ಷ ಎಂದು ಉಪಯೋಗಿಸಿಲ್ಲ .....

ಕೆ. ಎಚ್. ರಂಗನಾಥ್.—ಈ ಸಭೆಯಲ್ಲಿ ಮಾನ್ಯ ಆಚಾರ್ಯರವರು ಮಾತನಾಡಿದ್ದಾರೆ, ಮಾನ್ಯ ಕೃಷ್ಣನ್‌ರವರು ಮಾತನಾಡಿದ್ದಾರೆ, ಜೊತೆಗೆ ನನ್ನ ಅಭಿಪ್ರಾಯವನ್ನು ಕೊಟ್ಟಿದ್ದೇನೆ. ಇಲ್ಲಿ ವೈಯಕ್ತಿಕ ಅಭಿಪ್ರಾಯಗಳಿಗೆ ಬರಲಿಕ್ಕೆ ಸಾಧ್ಯವಿಲ್ಲ. ಇವತ್ತು ಈ ವಿಷಯ ಬಂದಿದೆ, ಇದನ್ನು ತೀರ್ಮಾನ ಮಾಡುವುದು ಇದೆ. ಇಲ್ಲಿ ಮಾತನಾಡಿದ ಅಭಿಪ್ರಾಯಗಳ ಮೇಲೆ ಸಂಪಾದಕೀಯ ಬರೆಯುವಾಗ ತಮ್ಮ ಅಗ್ರ ಲೇಖನದಲ್ಲಿ ವಿರೋಧದಪಕ್ಷದವರು ಮಾತನಾಡುವಾಗ ಎಲ್ಲರೂ ಲಪಟಾಯಿಸಿದ್ದಾರೆ ಎಂದರೆ A positive statement. ಈ ವಿಷಯವನ್ನು ನೇರವಾಗಿ ಪ್ರಿವಿಲೇಜ್ ಕಮಿಟಿ ಮುಂದೆ ಇಟ್ಟು ಪ್ರತಿಪಾದನೆ ಮಾಡಬೇಕು. ಹಾಗೆ ಮಾಡುತ್ತೀರಿ ಎಂದು ನಾನು ಮತ್ತು ಮಾನ್ಯ ವೀರಪ್ಪ ಮೊಯಿಲಿಯವರು ತಿಳಿದು ಕೊಂಡಿದ್ದೇವೆ. There is a prima–facie case. ಎಂದು ಹೇಳಬಲ್ಲೆ, ಅದಕ್ಕೋಸ್ಕರ ಹೊರಗಡೆ ಮಾಡಿದ ಭಾಷಣದ ಕೇಸನ್ನು ಇಲ್ಲಿ ಓದಿದ್ದನ್ನು ನಾವು ಕೇಳಿದ್ದೇವೆ. ಇಲ್ಲಿ ಅನ್ಯಾಯವಾಗಿರತಕ್ಕದ್ದು ಸಭೆಯಲ್ಲಿ ನಡೆದನಡವಳಿಕೆಗಳ ಮೇಲೆ ಬರೆಯತಕ್ಕ ಅಗ್ರ ಲೇಖನದಬಗ್ಗೆ.

ಶ್ರೀ ಎ. ಲಕ್ಷ್ಮೀಸಾಗರ್.— ಅಂತ್ಸಳೆಯವರ ವಿಚಾರ ಪತ್ರಿಕೆಗಳಲ್ಲಿ ಬಂತು. ನಾನು ಆ ಕೇಸಿನ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ಲೋಕಸಭೆಯಲ್ಲಿ ಪ್ರಸ್ತಾಪವಾಯಿತು. ಅದೇರೀತಿ ವಿಷಯ ಇಲ್ಲೂ ಪ್ರಸ್ತಾಪಕ್ಕೆ ಬಂತು. ಈಗ ಯಾವ ವಿಷಯವನ್ನು ತಂದು ಅನುಮತಿಯನ್ನು ಕೇಳುತ್ತಿದ್ದಾರೆ ಅದು ಚೌಕಟ್ಟಿನಲ್ಲಿ ಬರುವುದಿಲ್ಲ ಇದೇ ವಿಷಯ ಲೋಕಸಭೆಯಲ್ಲೂ ಕೂಡಾ ತೀರ್ಮಾನವಾಗಿದೆ ಎಂದು ತಮ್ಮ ಮೂಲಕ ಸಭೆಯ ಗಮನಕ್ಕೆ ತರುತ್ತೇನೆ.

MR. SPEAKAR : Are you referring to Arun Shourie's case ?

SRI A. LAKSHMISAGAR . – Yes Sir, Arun Shouries matter.

ಶ್ರೀ ಎಂ ಎಸ್ ಕೃಷ್ಣನ್ , ಮಾನ್ಯ ಮಂತ್ರಿಗಳು ಹೇಳಿದ್ದನ್ನು ನಾನು ಬಹಳ ಕೂಲಂಕುಷವಾಗಿ ಕೇಳಿದ್ದೇನೆ. ಮಾನ್ಯ ರಂಗನಾಥ್‌ರವರು ಹೇಳಿದ್ದನ್ನು ಈಗ ಸಮರ್ಥನೆ ಮಾಡಬೇಕಾಗಿದೆ. ಈ ಪ್ರಶ್ನೆ ಪಕ್ಷಾತೀತವಾದ ಪ್ರಶ್ನೆ ತಾವು ಆಡಳಿತ ಪಕ್ಷದಲಿದ್ದೀವೆಂದು ಇದು ಪ್ರಿವಿಲೇಜ್ ಮೋಷನ್‌ಗೆ ಬರುವುದಿಲ್ಲವೆಂದು ಹೇಳಬೇಕು ಹೇಳುತ್ತಿದ್ದೀರಿ, ನಾವು ಬಂದೇ ಬರುತ್ತದೆಂದು ನಡೆಯುತ್ತಿರತಕ್ಕ ವಾದವಿವಾದವನ್ನು ನೋಡಿದರೆ ಇದು ಅಷ್ಟು ಸಮಂಜಸವಾದುದಲ್ಲ.

ಅಧ್ಯಕ್ಷರು .— ಹಾಗೆ ವಾದವಿವಾದ ನಡೆದಿಲ್ಲ.

ಶ್ರೀ ಎಂ.ಎಸ್ ಕೃಷ್ಣನ್.—ಮಾನ್ಯ ಸಚಿವರಾದ ಲಕ್ಷ್ಮೀಸಾಗರ್‌ರವರು ಮಾಡಿದ ವಾದವನ್ನು ನೋಡಿದರೆ ಆ ರೀತಿ ನಡೆದ ಹಾಗೆ ಕಂಡುಬರುತ್ತದೆ. ಈ ಪ್ರಶ್ನೆ ಈ ಮನೆಯ ಗೌರವವನ್ನು ಎತ್ತಿ ಹಿಡಿಯತಕ್ಕದ್ದು ಇದೆ. ಈ ಮನೆಯ ಗೌರವವನ್ನು ಕಾಪಾಡಬೇಕಾದರೆ ಎಲ್ಲರೂ ಸೇರಿ ಹೋರಾಡಬೇಕಾಗುತ್ತದೆ. ಯಾರೋ ಬರೆದರೆ ಅದು ಸರಿಯಾದುದಲ್ಲ. ಹಕ್ಕುಚ್ಯುತಿಗೆ ಧಕ್ಕೆ ಬರುತ್ತದೆಂದು ಹೇಳಿದರೆ, ಮಾನ್ಯ ಮಂತ್ರಿಗಳು ಹೇಳಂದವುದನ್ನು ನೋಡಿದರೆ ಬಹಳ ವ್ಯತ್ಯಾಸವಿದೆ. ಒಳ್ಳೆಯ ಲಾಯರ್ ಬ್ಯಾಂಡ್ ಕೇಸ್ ವಾದಮಾಡಿದಹಾಗೆ ಇದೆ. ಹೊರಗಡೆ ಮಾತನಾಡಿದ್ದನ್ನು ಓದಿದರೆ ಹೇಗೆ, ಪತ್ರಿಕೆಯಲ್ಲಿ ಬರೆದಿದ್ದಾರೆ ಅದು ಬ್ರೀಚ್ ಆಫ್ ಪ್ರಿವಿಲೇಜ್‌ಗೆ ಬರುವುದಿಲ್ಲ ಅಂದರೆ ಹೇಗೆ, ಅದುದರಿಂದ ವಾದ ಮಾಡಿ ಏನು ಪ್ರಯೋಜನವಿಲ್ಲ ಇದು ಗಹನವಾದ ವಿಚಾರ ಇದನ್ನು ಪ್ರಿವಿಲೇಜ್ ಕಮಿಟಿಗೆ ಕಳುಹಿಸಬೇಕೆಂದು ನನ್ನ ಅಭಿಪ್ರಾಯ. ಇದು ಬಿಟ್ಟು ನಮಗೆ ಬೇರೆ ದಾರಿಯಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ಈ ಸಭೆಯ ಘನತೆ, ಗೌರವ ಮತ್ತು ಸದಸ್ಯರ ಹಕ್ಕುಗಳನ್ನು ರಕ್ಷಣೆ ಮಾಡುವುದಕ್ಕೆ ಹಾಗೂ ಅವುಗಳನ್ನು ಕಾಪಾಡಿಕೊಂಡು ಬರುವ ದೃಷ್ಟಿಯಿಂದ ನಾವು ಹೆಚ್ಚು ಹೇಳುವ ಅವಶ್ಯಕತೆ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ, ತಾವು ಇದರ ಬಗ್ಗೆ ನಿರ್ಣಯ ನೀಡಬೇಕು. ಯಾವುದೇ ಪಕ್ಷಕ್ಕೆ ಹಕ್ಕು ಚ್ಯುತಿ ಬಂದಾಗ ಈ ಮನೆಯ ಗೌರವ ಮತ್ತು ಘನತೆಗೆ ಹಕ್ಕುಚ್ಯುತಿಯಾದಂತೆ. ಅಂತಹ ಒಂದು ಹಕ್ಕುಚ್ಯುತಿ ಏನಾದರೂ ನಡೆದಿದೆಯೇ ಎನ್ನುವುದನ್ನು ನಾವು ಇವತ್ತು ನೋಡಬೇಕಾಗಿದೆ. ನಾವು ಯಾವುದೇ ಒಂದು ಪಕ್ಷದ ದೃಷ್ಟಿಯಿಂದ ಇದನ್ನು ನೋಡಬಾರದು. ಅವರು ಬರೆದಿರುವ ಲೇಖನದಿಂದ ಸದಸ್ಯರ ಹಕ್ಕು ಚ್ಯುತಿಯಾಗಿದೆಯೇ ಎನ್ನುವುದನ್ನು ನೋಡಬೇಕು. ಆ ವಿಷಯವನ್ನು ನಾವು ಹಕ್ಕುಚ್ಯುತಿ ಸಮಿತಿಗೆ ಕಳುಹಿಸಿಕೊಡುವುದಕ್ಕೆ ಯೋಗ್ಯವಾಗಿದೆಯೇ ಇಲ್ಲವೇ ಎನ್ನುವುದನ್ನೂ ಸಹ ನೋಡಬೇಕಾಗುತ್ತದೆ. ಈ ಒಂದು ದೃಷ್ಟಿಯಲ್ಲಿ ನನಗೆ ತಿಳಿದಮಟ್ಟಿಗೆ ಈ ಮನೆಯ ಕಾರ್ಯಕಲಾಪಗಳನ್ನು ವರದಿ ಮಾಡುವಾಗ ಅವರು ಏನಾದರೂ ತಪ್ಪಾಗಿ ವರದಿ ಮಾಡಿದ್ದರೆ ಅದು ಹಕ್ಕುಚ್ಯುತಿಯಾಗುತದೆ. ನಾವು ಈ ಮನೆಯಲ್ಲಿ ಎಷ್ಟು ಸ್ವಾತಂತ್ರವಾಗಿರುತ್ತೇವೆಯೋ ಅಷ್ಟೇ ಸ್ವಾತಂತ್ರ ಪತ್ರಿಕಾ ಸ್ವಾತಂತ್ರಕ್ಕೂ ಇದೆ ಪತ್ರಿಕಾ ಸಂಪಾದಕರ ಕೈಯಲ್ಲೂ ಸ್ವಾತಂತ್ರ್ಯವಿದೆ. ನಮಗೆ ಹೇಗೆ ಒಂದು ಸ್ವಾತಂತ್ರ್ಯದ ಪ್ರಿವಿಲೇಜ್ ಇದೆಯೋ ಅದೇ ರೀತಿ ಅವರಿಗೂ ಇದೆ. ಆದರೆ ಇವತ್ತು ಪತ್ರಿಕೆಗಳಲ್ಲಿ ಬಂದಿರತಕ್ಕಂಥ ವಿಷಯ ಹಕ್ಕುಚ್ಯುತಿಯಾಗುವುದಿಲ್ಲ. ಆದರೆ ಅದರ ಅರ್ಥ ಸಂಪಾದಕರೂ ಅಷ್ಟೇ ಜವಾಬ್ದಾರಿಯಿಂದ ಬರೆಯಬೇಕಾಗಿದೆ. ಹಾಗೆಯೇ ನಾವು ಕೂಡ ಅಷ್ಟು ಸೆನ್ಸಿಟಿವ್ ಆಗಿ ಇರಕೂಡದು. ಆದ್ದರಿಂದ ಈ ವಿಷಯದ ಬಗ್ಗೆ ಈಗಾಗಲೇ ಮಾನ್ಯ ಕಾನೂನು ಮಂತ್ರಿಗಳು ಕೂಡ ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.— ಸ್ವಾಮಿ, ನಾಳೆ ನಿಮಗೂ ಇದೇ ಪರಿಸ್ಥಿತಿ ಬಂದರೂ ಬರಬಹುದು. ಆಗ ನಿಮಗೂ ಇದರಿಂದ ತೊಂದರೆಯಾಗಬಹುದು. ಸ್ವಲ್ಪ ಯೋಚನೆಮಾಡಿ ನೋಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ನಾನು ವಿಚಾರದ ಗಂಭೀರತೆಯನ್ನು ಅರ್ಥ ಮಾಡಿಕೊಂಡೇ ಮಾತನಾಡುತ್ತಿದ್ದೇನೆ. ಹಿಂದೆ ನಾನು ಈ ಬಗ್ಗೆ ಮಾತನಾಡಿದ್ದೇನೆ. ಬೇಕಾದರೆ ವರದಿಯನ್ನು ತರಿಸಿ ನೋಡಿ. ಮತ್ತೆ, ನಮ್ಮ ದೇಶದ ಮಾಜಿ ಪ್ರಧಾನ ಮಂತ್ರಿಗಳಾದಂಥ ಶ್ರೀಮಾನ್ ಮುರಾರ್ಜಿದೇಸಾಯಿಯವರ ಮೇಲೆ ಅಮೇರಿಕಾದವರು ಒಂದು ಗ್ರಂಥವನ್ನು ಬರೆದಿದ್ದಾರೆ. ಅವರು ಆ ಗ್ರಂಥದಲ್ಲಿ ನೇರವಾಗಿ ಸಿ. ಬಿ. ಐ. ಏಜೆಂಟ್ ಎಂದು ಬಣ್ಣಿಸಿದ್ದಾರೆ. ಅವರು ಹಣ ತೆಗೆದುಕೊಂಡಿದ್ದಾರೆಂದು ಆಪಾದನೆ ಮಾಡಿದ್ದಾರೆ. ಆದರೆ ಅಂತಹ ಒಬ್ಬ ಮಹಾಪುರುಷರ ಮೇಲೆ ಆ ರೀತಿಯ ಆಪಾದನೆ ಮಾಡಿದ್ದಾರೆ, ಆದ್ದರಿಂದ ಅವರು ಏನು ಮಾಡಿದ್ದಾರೆಂದು ಮುಂಬೈ ಹೈಕೋರ್ಟಿನಲ್ಲಿ ರಿಟ್ ಫೈಲ್ ಮಾಡಿದ್ದಾರೆ. ಆ ವಿಷಯ ಈಗ ಹೈಕೋರ್ಟಿನಲ್ಲಿದೆ. ಆದ್ದರಿಂದ ನಾನು ಆ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ಅವರು ಹೈಕೋರ್ಟಿನಲ್ಲಿ ರಿಟ್ ಫೈಲ್ ಮಾಡಿದಾಗ ಅವರಿಗೆ ಅಲ್ಲಿ ಸ್ಟೇ ಆರ್ಡರ್ ಕೊಡಲಿಲ್ಲ. ನಾವು ಇದನ್ನು ಅರ್ಥ ಮಾಡಿಕೊಳ್ಳಬೇಕು, ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ತಂದಿರತಕ್ಕಂಥ ನಿರ್ಣಯವನ್ನು ವಾಪಸ್ಸು ಪಡೆಯಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತೆ ತಮ್ಮ ವಾದದಲ್ಲಿ ಏನೂ ಹುರಳಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ವಿಷಯವನ್ನು ಪ್ರಿವಿಲೇಜ್ ಕಮಿಟಿಗೆ ಕಳುಹಿಸಿಕೊಡುವಂಥ ಅವಶ್ಯಕತೆಯೇನೂ ಇಲ್ಲವೆಂದು ನಾನು ಇದನ್ನು ಸಂಪೂರ್ಣವಾಗಿ ಅಲ್ಲಗಳೆಯುತ್ತೇನೆ. ತಮ್ಮ ಬೇಡಿಕೆ ನ್ಯಾಯವಾದುದಲ್ಲ. ಆದ್ದರಿಂದ ಯಾರು ಇದರಲ್ಲಿ ಸಂಶಯವನ್ನು ವ್ಯಕ್ತ ಪಡಿಸಿದ್ದಾರೋ ಅವರು ನೇರವಾಗಿ ಕೋರ್ಟಿಗೆ ಹೋಗಬಹುದು ಆ ಪತ್ರಿಕೆಯ ಸಂಪಾದಕರ ಮೇಲೆ ಸೂಟ್ ಫೈಲ್ ಮಾಡಬಹುದು. ನ್ಯಾಯಾಂಗಕ್ಕೆ ಇರುವಂಥ ಹಕ್ಕು ತಾವು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ತಾವು ಈ ವಿಷಯವನ್ನು ಇಲ್ಲಿಗೆ ಕೈಬಿಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಈ ವಿಷಯದ ಬಗ್ಗೆ ಇದುವರೆಗೂ ಬಹಳ ಗಂಭೀರವಾಗಿ ಚರ್ಚೆ ಮಾಡಿದ್ದೇವೆ. ಆದ್ದರಿಂದ ಮುಂದಿನ ವಿಷಯಕ್ಕೆ ಹೋಗೋಣ.

ಶ್ರೀ ಎಂ. ರಘುಪತಿ.— ಮಾನ್ಯ ಅಧ್ಯಕ್ಷರೇ, ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದರಿಂದ ತಮಗೆ ಅನುಕೂಲವಾಗುತ್ತದೆ. ನಾನು ಹಿಂದೆ ವಿಧಾನ ಪರಿಷತ್ತಿನ

ಸದಸ್ಯನಾಗಿದ್ದಾಗ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪ್ರತಿಕೆಗಳಲ್ಲಿ ವ್ಯಂಗ್ಯ ಚಿತ್ರದ ಬಗ್ಗೆ ನಾನು ಒಂದು ನೋಟೀಸ್ ಕೊಟ್ಟಿದ್ದೆ. ಆ ಬಗ್ಗೆ ಅಂದಿನ ಸಭಾಪತಿಯವರು ಒಂದು ತೀರ್ಪು ನೀಡಿದ್ದಾರೆ. ಆ ತೀರ್ಪು ತಾವು ತರಿಸಿ ನೋಡಿದರೆ ಇದರಿಂದ ತಮಗೆ ಅನುಕೂಲವಾಗಬಹುದೆಂದು ನಾನು ತಿಳಿದು ಕೊಂಡಿದ್ದೇನೆ. ಮತ್ತೆ ಎರಡನೆಯದಾಗಿ, ಹಿಂದಿನ ರಾಜ್ಯಪಾಲರ ಬಗ್ಗೆ ಶ್ರೀಮಾನ್ ಜಿ. ಎಸ್. ಉಳ್ಳಾಲ್‌ರವರು ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಿದಾಗ ಅದರ ಬಗ್ಗೆ ಕೂಡ ಒಂದು ತೀರ್ಪು ಕೊಟ್ಟಿದ್ದಾರೆ. ಅದೂ ಕೂಡ ತಮಗೆ ಸಹಾಯಕವಾಗುತ್ತದೆ.

I would like to quote the following from the Parliamentar Procedure written by Kaul and Shakdhar, which says :

(Page 226)

"The Speaker observed that according to the practice, he would ask the Editor of the paper to state what he has to say before taking up matter further."

ಈ ತರಹ ಲಘುವಾಗಿ ತೆಗೆದುಕೊಳ್ಳಬಾರದು. ಶ್ರೀ ರಂಗನಾಥ್‌ರವರು ಹಿಂದೆ ಸ್ಪೀಕರ್ ಆಗಿದ್ದಂಥವರು. ಯಾವುದೇ ಒಂದು ನಿರ್ಣಯವನ್ನು ತೆಗೆದುಕೊಳ್ಳುವ ಮೊದಲು ಆ ಸಂಪಾದಕರಿಗೆ ಒಂದು ಅವಕಾಶವನ್ನು ಕೊಡಬೇಕು ಇದರಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಆದ್ದರಿಂದ ಮಾನ್ಯ ಸಭಾಧ್ಯಕ್ಷರು ಈ ರಿಪೋರ್ಟನ್ನು ತರಿಸಿಕೊಳ್ಳಬೇಕಾಗುತ್ತದೆ.

SRI MALLIKARJUNA M. KHARGE.—You make your point clear so that we can understand.

SRI M. RAGHUPATHY.—According to the practice, the Speaker should ask the Editor of the concerned paper to say what he wants to say before taking up further action in the matter. ಈ ವಿಷಯವನ್ನು ಮುಂದಕ್ಕೆ ತೆಗೆದುಕೊಳ್ಳುವ ಮೊದಲು ಸಂಪಾದಕರ ಅಭಿಪ್ರಾಯವನ್ನು ಕೇಳಬೇಕು. ಇಷ್ಟೇ ನನ್ನ ಅಭಿಪ್ರಾಯ.

ಅಧ್ಯಕ್ಷರು.—ಈ ವಿಚಾರವಾಗಿ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ.

ಶ್ರೀ ಎಂ. ಎಸ್ ಕೃಷ್ಣನ್.—ಶ್ರೀಮಾನ್ ರಘುಪತಿಯಂವರು ಪೂರ್ತಿಯಾಗಿ ಓದಿದ್ದರೆ ಚನ್ನಾಗಿತ್ತು. ಮುಂದಕ್ಕೆ ಏನಿಗೆ ಎಂದರೆ,

"On March 29, 1967, the Speaker read out to the House the letter of apology received from the Editor of the Hindustan Times to the effect that the publication of the news item 'was a genuine error.' The House accepted the apology and directed that the letter of apology together with the actual statement made by the Member concerned in the House on March 23, 1967, should be published on the front page of the newspaper in its next issue. This was done by the newspaper."

If the argument of Sri Raghupathy that.....

(INTERRUPTION)

ಶ್ರೀ ಎಂ. ಎಸ್. ಕೃಷ್ಣನ್.—ಹಕ್ಕು ಚ್ಯುತಿ ಇಲ್ಲವೆಂಬ ಅಭಿಪ್ರಾಯ ಇದ್ದರೆ ಅದು ಸರಿಯಲ್ಲ. ಹಕ್ಕುಚ್ಯುತಿ ಇದೆ. ಆದರೆ ಈ ಬಗ್ಗೆ ತೀರ್ಮಾನಕ್ಕೆ ಬರುವುದಕ್ಕೆ ಮುಂಚೆ ಸಂಪಾದಕರನ್ನು ಕರೆಸಬೇಕು. ಎನ್ನುವುದು ಒಪ್ಪತಕ್ಕದ್ದು.

ಶ್ರೀ ಎಂ. ವೀರಪ್ಪ ಮೊಯಿಲಿ —ಸನ್ಮಾನ್ಯ ಸಚಿವರುಗಳಾದ ಶ್ರೀ ಲಕ್ಷ್ಮೀಸಾಗರ್ ಮಂತ್ರಿ ಬೊಮ್ಮಾಯಿಯಂವರು ಕೆಲವು ವಿಚಾರಗಳನ್ನು ಹೇಳಿದ್ದಾರೆ ಶ್ರೀಮಾನ್ ಲಕ್ಷ್ಮೀಸಾಗರ್ ಅವರು ಯಾವ ಒಂದು ಕೇಸನ್ನು ಸೈಟ್ ಮಾಡಿದರೋ, ಅದು ಈಗ ಇರತಕ್ಕಂಥ ಪರಿಸ್ಥಿತಿಗೆ ಹೊಂದಾಣಿಕೆ ಆಗುವುದಿಲ್ಲ. ಇದರ ಬಗ್ಗೆ ಶ್ರೀಮಾನ್ ಕೃಷ್ಣನ್ ಅವರು ಈಗಾಗಲೇ ವ್ಯಾಖ್ಯಾನ ಮಾಡಿದ್ದಾರೆ. ಆದ್ದರಿಂದ ನಾನು ಪುನ: ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಇಬ್ಬರು ಸಚಿವರು ಒಂದು ಮಾತನ್ನು ಹೇಳಿದರು. ಅದೇನೆಂದರೆ, ಡೆಫಮೇಷನ್ ಆಗತಕ್ಕಂಥಾದ್ದನ್ನು ಇಲ್ಲಿ ಏಕೆ ಮಾಡಬೇಕು, ಕೋರ್ಟಿಗೆ ಕಳಿಸಿ ಎಂದರು. ಈ ಸದನದ ಸಂಪ್ರದಾಯಕ್ಕೆ ಇದು....

(ಗೊಂದಲ)

SRI A. LAKSHMISAGAR.—Let me put the records correct. I did not advance the argument. ನಾನು ಹೇಳಲಿಲ್ಲ ಎಂದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಹೇಳಲಿಲ್ಲ. ಶ್ರೀ ಬೊಮ್ಮಾಯಿಯವರು ಹೇಳಿದರಂ.

ಶ್ರೀ ಎ. ಲಕ್ಷ್ಮೀಸಾಗರ್.—ಮತ್ತೆ ಅದನ್ನು ಮೊದಲೇ ಏಕೆ ಹೇಳಲಿಲ್ಲ ?

ಶ್ರೀ ಎಂ ವೀರಪ್ಪ ಮೊಯಿಲಿ.—ಈ ಸದನದ ಹಕ್ಕಿನ ಬಗ್ಗೆ ಯಾವುದೇ ಒಂದು ಪ್ರಶ್ನೆ ಬಂದಾಗ ಅದನ್ನು ಸಂಪೂರ್ಣವಾಗಿ ನಿರ್ವಹಿಸುವ ಹಕ್ಕು ಮತ್ತು ಪರಮಾಧಿಕಾರ ಈ ಸದನಕ್ಕೆ ಇದೆ. ಯಾರಾದರೂ ಸದಸ್ಯರಿಗೆ ಏನಾದರೂ ಹಕ್ಕುಚ್ಯುತಿಯಾದರೆ, ಕೋರ್ಟಿಗೆ ಹೋಗಿ ಪರಿಹಾರ ತೆಗೆದುಕೊಳ್ಳಬೇಕಂ ಎಂದು ಹೇಳಿದರೆ ಇಲ್ಲಿ ಈ ಸದನ ಏತಕ್ಕೆ ಇರಬೇಕು ? ನಾವು ಸದಸ್ಯರಾಗಿ ಇಲ್ಲಿ ಏತಕ್ಕೆ ಇರಬೇಕು ? ಹೀಗಾದರೆ ಈ ಸದನದ ಘನತೆ, ಗೌರವಕ್ಕೆ ಧಕ್ಕೆ ಬರುತ್ತದೆ. In the Parctice and Procedure in Parliament written by Sriyuths M. N. Kaul and S. L. Shakhdhar, they says thus :

"Speeches and writings reflecting on the House for its committes or Members are punished by the House as a contempt on the principle that such acts tend to abstruct the Houses in the performance of their functions by diminishing the respect due to them. The House may punish not only contempt arising out of facts of which the ordinary courts will take cognizance, but those of which they cannot.

ಪ್ರೂವ್ ಆದುದನ್ನು ಚಾರ್ಜ್‌ಗೆ ತೆಗೆದುಕೊಳ್ಳಬೇಕಾಗಿಲ್ಲ ಮತ್ತು ಕೋರ್ಟ್‌ಗೆ ತೆಗೆದುಕೊಳ್ಳಬೇಕಾದ ವಿಚಾರ ಇಲ್ಲ. ಎರಡನ್ನೂ ಕೂಡ ವಿಚಾರಣೆ ಮಾಡತಕ್ಕಂಥ ಹಕ್ಕು ಈ ಸದನಕ್ಕೆ ಇದೆಯೆಂದು ಇದರಲ್ಲಿ ಸ್ಪಷ್ಟವಾಗಿ ಕಾಣಿಸಲಾಗಿದೆ. ಆದ್ದರಿಂದ ಕ್ರಿಮಿನಲ್ ಆಗಲಿ, ಸಿವಿಲ್ ಆಗಲಿ libel ಅಂತ ಆಗುವ ವಿಚಾರಗಳನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿ ವಿಚಾರಣೆ ಮಾಡಬೇಕೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಇನ್ನೂ ಒಂದು ರೂಲ್‌ನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ೧೯೭೨ನೇ ಇಸವಿಯಿಂದಲೂ ನಾನು ಈ ಸದನದಲ್ಲಿ ಸದಸ್ಯನಾಗಿದ್ದೇನೆ. ಒಂದು ಗಂಭೀರವಾದ ವಿಚಾರ ಬಂದಾಗ ಅದನ್ನು ಯಾವಾಗಲೂ ಕೂಡ ಪಕ್ಷಾತೀತವಾಗಿ ನೋಡತಕ್ಕಂಥ ಸಂಪ್ರದಾಯ ಈ ಸದನಕ್ಕೆ ಇದೆ. ಆದರೆ ಇವತ್ತು ಈ ಸತ್ಸಂಪ್ರದಾಯವನ್ನು ಬಿಟ್ಟುಬಿಡಿ ಎಂದು ಹೇಳುವ ಅಭಿಪ್ರಾಯಂ ಮಾನ್ಯ ಸಚಿವರುಗಳಾದ ಶ್ರೀ ಲಕ್ಷ್ಮೀಸಾಗರ್ ಮತ್ತು ಶ್ರೀ ಬೊಮ್ಮಾಯಿಯವರು ಮಾತನಾಡಿದ ಧಾಟಿಯಿಂದ ಗೊತ್ತಾಗುತ್ತದೆ,

ಶ್ರೀ ಎ. ಲಕ್ಷ್ಮೀಸಾಗರ್.—ಪಕ್ಷದ ದೃಷ್ಟಿಯಿಂದ ನಾನು ಮಾತನಾಡಲಿಲ್ಲ. ಈ ಪಕ್ಷವಾಗಲೀ, ವಿರೋಧ ಪಕ್ಷವಾಗಲೀ ಇದರ ಬಗ್ಗೆ ನಾನು ವ್ಯಾಖ್ಯಾನ ಮಾಡಲೇ ಇಲ್ಲ, ನಾನು ಹೇಳಿದ್ದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಸರಿಯಾಗಿ ತಿಳಿದುಕೊಂಡಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಸೂಕ್ಷ್ಮವಾಗಿ ವಿಚಾರ ಮಾಡಿರಬಹುದು. ಆದರೆ ಮಾನ್ಯ ಸಚಿವರು ಮಾತನಾಡಿರತಕ್ಕಂಥ ಧಾಟಿಯನ್ನು ನೋಡಿದರೆ...

ಅಧ್ಯಕ್ಷರು.—ಇದರ ಬಗ್ಗೆ ಸಾಕಷ್ಟು ವಿಚಾರ ಆಗಿದೆಯಲ್ಲ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಇದರ ಬಗ್ಗೆ ಆಗಿಲ್ಲ.

ಅಧ್ಯಕ್ಷರು.—ಇನ್ನು ಎಷ್ಟು ಹೊತ್ತು ಮಾತನಾಡಬೇಕೆಂದು ಇದ್ದೀರಿ ? How long we have to prolong on this issue ?

SRI M. VEERAPPA MOILY.—Sir, it is a very important issue.

MR. SPEAKER.—No...

SRI M. VEERAPPA MOILY.—I have got every right to submit and bring it to your notice...

MR. SPEAKER.—If both of us work on rights, then, how can we function here and conduct the business of the House ? Please co-operate...

SRI M. VEERAPPA MOILY.—Sir, I am telling you, we are here to co-operate with the Speaker in conducting the House. ಬಹಳಪ್ರಾಮುಖ್ಯವಾದ ವಿಷಯವನ್ನು ಹೇಳುವುದಕ್ಕೆ ತಾವು ಅವಕಾಶ ಕೊಡದಿದ್ದರೆ ನಾನು ಕುಳಿತುಕೊಳ್ಳುತ್ತೇನೆ. ಈ ಸದನದ ನಿಯಮಕ್ಕೆ ಸಂಬಂಧಪಟ್ಟ ವಿಚಾರವನ್ನು ಸಭೆಯ ಗಮನಕ್ಕೆ ತರಬೇಕೆಂದು ನಾನು ಹೊರಟಿರುವಾಗ ತಾವು ಅಪ್ಪಣೆ ಕೊಟ್ಟರೆ ಹೇಳುತ್ತೇನೆ.

MR. SPEAKER.—At the same time, you must know that I have to take up certain other issues also.

SRI M. VEERAPPA MOILY.—I have raised a tangible issue. I am not repeating what others say.

MR. SPEAKER.—You have made out your case...

SRI M. VEERAPPA MOILY.—I have not made my case, I have to quote certain rules. There is rule 193, which I want to read here.

MR. SPEAKER.—I have to regulate the business of the House.

SRI M. VEERAPPA MOILY.—Sir, we are here to co-operate with the Chair. ಇಲ್ಲಿ ೧೯೩ನೇ ನಿಯಮದ ಪ್ರಕಾರ ಏನಿದೆ ? ಮಾನ್ಯ ಸಚಿವರಾದ ಶ್ರೀರಘುಪತಿಯವರು ಪ್ರಸ್ತಾಪ ಮಾಡಿದ್ದಾರೆ. ಸಂಬಂಧಪಟ್ಟ ಸಂಪಾದಕರಿಗೆ ಅಧ್ಯಕ್ಷರು ಕಾಗದ ಬರೆದು ವಿಚಾರವನ್ನು ತಿಳಿದುಕೊಳ್ಳಬೇಕೆಂದು ಅವರು ಹೇಳಿದರು.

ಈಗ ನೀವು ತಿದ್ದುಪಡಿಮಾಡಿದಂಥಾ ರೂಲು ೧೯೪(೨)ಕ್ಕೆ ಪ್ರಕಾರ ಈ ವಿಷಯಾ ಬರುತ್ತದೋ ಇಲ್ಲವೋ ಅನ್ನುವುದನ್ನು ತಮ್ಮ ಮುಂದೆ ಇಡುತ್ತೇನೆ. ಅದು ಈರೀತಿ ಇದೆ :—

2 P.M.

"If objection to leave being granted is taken, the Speaker shall request those members who are in favour of leave being granted to rise in their places & if not less than ten members rise accordingly, Spealler shall unsimate rise that leave is granted."

ಇನ್ನೊಂದು ವಿಚಾರ ಏನೆಂದರೆ ತಾವು ಈ ಸದನದ ಒಂದು ಪ್ರಿವಿಲೇಜ್ ಕಮಿಟಿಯನ್ನು ನೇಮಕ ಮಾಡಿದಿರಿ. ಇಂತಹ ಕೆಲವು ವಿಚಾರಗಳು ಬಂದಾಗ ಸಮಿತಿಗೆ ಅಧಿಕಾರಗಳನ್ನು ಕೊಟ್ಟಾಗ ಅದು ತನ್ನ ಕರ್ತವ್ಯವನ್ನು ನಿರ್ವಹಿಸಬೇಕಾಗುತ್ತದೆಯೇ ವಿನಾ. ಇದನ್ನು ತಾವೇನಾದರೂ ಉಪಯೋಗ ಮಾಡಿಕೊಳ್ಳುವ ಹಾಗಿದ್ದರೆ ಆದಕ್ಕೆ ನಾವೇನೂ ಅಡ್ಡಿ ಬರುವುದಿಲ್ಲ. ಆದರೆ ಆ ಒಂದು ನಿರ್ಣಯದ ಬಗ್ಗೆ

ಹೇಳಬೇಕಾದರೆ ಅದೇನಾದರೂ ಈ ಸದನದ ಹಕ್ಕಿಗೆ ಚ್ಯುತಿ ಬಂದಾಗ ಆದು ಈ ಸದನದ ಪ್ರಶ್ನೆಯಾಗಿ ಬರುತ್ತದೆ. ಆದನ್ನು ವಿರೋಧ ಪಕ್ಷದ ಎಲ್ಲರೂ ಅನ್‌ಕಂಡೀಷನ್ ಆಗಿ, ಅಬ್ಸ್‌ಲ್ಯೂಟ್ ಆಗಿ ವರದಿ ಮಾಡಿದ್ದರಿಂದ ಹೇಳಬೇಕಾಗಿದೆ. ''Opposition as a class''–the prestige of the Members have beeu diminished by such remarks in the editorial. In view of that there is a strong case, forcible case sofar as the prestige and privileges of the Members are concerned. It is for the Hon'ble Speaker to take an appropriate step in this behalf.

MR. SPEAKER.—I have heard and reserved my Ruling. Let us go to the next subject.

ಮಂನವಿಗಳು

ಲೋಕೋಪಯೋಗಿ ಇಲಾಖೆಯಲ್ಲಿ ನೌಕರರನ್ನು ಖಾಯಂ ಗೊಳಿಸುವ ಬಗ್ಗೆ.

ಶ್ರೀ ಎಸ್. ಸೂರ್ಯನಾರಾಯಣರಾವ್,—ಮಾನ್ಯ ಅಧ್ಯಕ್ಷರೇ, ೧೬ನೇ ತಾರೀಖಿನಿಂದಲೂ ಲೋಕೋಪಯೋಗಿ ಇಲಾಖೆಯಲ್ಲಿರುವ ನೌಕರರು ತಮ್ಮ ಬೇಡಿಕೆಗಳ ಬಗ್ಗೆ ಅನಿರ್ದಿಷ್ಟಕಾಲ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ.ಆ ವಿಚಾರವಾಗಿ ನಿನ್ನೆಯೂ ಸಹ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಮತ್ತು ಇದರ ಬಗ್ಗೆ ನಾನು ಒಂದು ನೋಟೀಸ್‌ನ್ನೂ ಸಹ ಕಳುಹಿಸಿದ್ದೇನೆ. ಅವರನ್ನು ಖಾಯಂಗೊಳಿಸುವ ಬಗ್ಗೆ ಕೇಳಿದ್ದೇನೆ. ಈಗ ಈ ಸಭೆಯಲ್ಲಿ ಮಾನ್ಯ ಲೋಕೋಪಯೋಗಿ ಇಲಾಖಾ ಮಂತ್ರಿಗಳು ಇರುವುದರಿಂದ ಅದಕ್ಕೆ ಸೂಕ್ತ ಉತ್ತರ ಹೇಳಬೇಕಾಗಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ನನ್ನ ಹತ್ತಿರ ಈಗ ಲಿಖಿತ ಉತ್ತರ ಇಲ್ಲ. ಈದಿನ ಅಜೆಂಡಾದಲ್ಲಿ ಇಲ್ಲದೇ ಇದ್ದುದರಿಂದ ಅದನ್ನು ನಾನು ತರಲಿಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಇದರ ಬಗ್ಗೆ ಲಿಖಿತ ಉತ್ತರ ಇದ್ದರೆ ಚೆನ್ನಾಗಿತ್ತು.

ಶ್ರೀ ಹೆಚ್.ಡಿ. ದೇವೇಗೌಡ.—ಲಿಖಿತ ಉತ್ತರ ಇಲ್ಲದೇ ಹೋದರೂ ತಮಗೆ ಸಮಾಧಾನವಾಗುವ ಹಾಗೆನೇ ಉತ್ತರ ಹೇಳುತ್ತೇನೆ, ಸಂಶಯ ಬೇಡ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಆಗಬಹುದು, ಹೇಳಿ.

ಶ್ರೀ ಹೆಚ್.ಡಿ. ದೇವೇಗೌಡ.—ಪತ್ರಿಕೆಯಲ್ಲಿ ವರದಿಯಾಗಿರತಕ್ಕಂಥಾ ಅಂಶ ದಿನಗೂಲಿ ನೌಕರರಿಗೆ ಸ್ವಲ್ಪ ಆ ಸಮಾಧಾನವಾಗಿದೆ ಎಂದು ಮತ್ತು ಈ ಬಗ್ಗೆ ವಿಷಯಗಳನ್ನು ಮಾನ್ಯ ಎಸ್. ಸೂರ್ಯನಾರಾಯಣರಾವ್ ಹಾಗೂ ಮಾನ್ಯ ಎಂ.ಎನ್. ಕೃಷ್ಣಪ್ಪರವರೂ ಕೂಡ ಪ್ರಸ್ತಾಪ ಮಾಡಿದ್ದನ್ನು ನಾನು ಕೇಳಿದ್ದೇನೆ. ಅದಕ್ಕೆ ಸ್ಪಷೀಕರಣ ನಾನು ನೀಡುವುದಕ್ಕೆ ಬಯಸುತ್ತೇನೆ. ಅವರು ಮಾಡುತ್ತಾ ಇರತಕ್ಕಂಥಾ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸುವುದಕ್ಕೆ ಇದರಿಂದ ಅವಕಾಶವಾಗಬಹುದು ಎಂದು ನಾನು ತಿಳಿದಿದ್ದೇನೆ. ಮಾನ್ಯ ಅಧ್ಯಕ್ಷರೂ ಸಹ ಇದರ ಬಗ್ಗೆ ಸ್ಪಷ್ಟೀಕರಣ ನೀಡುವುದಕ್ಕೆ ಅಪ್ಪಣೆ ಕೊಟ್ಟಿರುವುದರಿಂದ ನಾನು ಮತ್ತೊಮ್ಮೆ ಈ ಸಭೆಗೆ ಸ್ಪಷ್ಟೀಕರಣ ಕೊಡಲು ಇಚ್ಛಿಸುತ್ತೇನೆ. ಈ ಲೋಕೋಪಯೋಗಿ ಇಲಾಖೆಯಲ್ಲಿ ೧೪೫೩೦ ಜನ ಏನು ಇದ್ದಾರೆ ಅವರಲ್ಲಿ ೧೦೬೦೦ ಜನ ಗ್ಯಾಂಗ್ ಮನ್‌ಗಳನ್ನು ಖಾಯಂ ಗೊಳಿಸತಕ್ಕದ್ದರ ಬಗ್ಗೆ ವರದಿಯಾಗಿದ್ದರೂ ಕೂಡ ಅದರ ಪೂರ್ಣ ವರದಿ ಇನ್ನೂ ಆಗಿಲ್ಲ. ಆದರೆ ಈಗ ನಾನು ಅದರ ಸಂಪೂರ್ಣ ವಿವರಣೆಯನ್ನು ಕೊಟ್ಟು ಮೇಲಾದರೂ ಕೂಡ ನಮ್ಮ ಮಿತ್ರರು ಏನು ಸತ್ಯಾಗ್ರಹ ಮಾಡುತ್ತಿದ್ದಾರೆ ಅವನ್ನು ಕೈಬಿಡಬಹುದು ಎಂದು ತಿಳಿಸಿದ್ದೇನೆ. ಈ ಗ್ಯಾಂಗಮನ್‌ಗಳು ೧-೪-೧೯೮೧ ರಿಂದ ೧-೪೧-೧೯೮೨ರ ವರೆಗೆ ೨೪೦ ದಿವಸ ಕೆಲಸ ಮಾಡಿದ್ದರೆ ಸಾಕು, ೫ ವರ್ಷದ ಮೇಲ್ಪಟ್ಟು ಯಾರು ಕೆಲಸ ಮಾಡಿರುತ್ತಾರೋ ಅವರಿಗೆಲ್ಲಾ ಖಾಯಂ ಗೊಳಿಸುವ ಹಾಗೆ ನಿರ್ಧಾರ ತೆಗೆದುಕೊಂಡಿದ್ದೇವೆ, ಆದರೆ ಪರಿಶಿಷ್ಟ ವರ್ಗದವರಿಗೆ ೫ ವರ್ಷ ಆಗಿರಬೆಕು ಅನ್ನುವುದು ಅಪ್ಲೈ ಆಗುವುದಿಲ್ಲ. ೨೪೦ ದಿವಸ ಅವರು ಕೆಲಸ ಮಾಡಲೇ ಬೇಕಾಗುತ್ತದೆ. ಅವರು ಒಂದು ವರ್ಷ ಕೆಲಸ ಮಾಡಿದರೆ ಸಾಕು ಖಾಯಂ ಆಗುವ ಹಾಗೆ ತೀರ್ಮಾನ ತೆಗೆದುಕೊಂಡಿದ್ದೇವೆ. ಅಲ್ಲದೆ ಅವರಿಗೆ ಇದರ ಬಗ್ಗೆ ರೋಸ್ಟರ್ ಕೂಡ ಅಪ್ಲೈ ಆಗಬೇಕಾದ್ದೇನೂ ಇಲ್ಲ.